ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

BENGALURU
CITY UNIVERSITY

Office of the Registrar, Central College Campus, Dr. B.R. Ambedkar Veedhi, Bengaluru – 560 001.
PhNo.080-22131385, E-mail: registrar@bcu.ac.in

ಸಂ:ಬಿಸಿಯು/ಸಿಂಡಿಕೇಟ್/ಎಸ್‌ವೈಎನ್-22/111 /2023-24 ದಿನಾಂಕ: 04.08.2023.

ಗೆ,
ಮಾನ್ಯ ಸಿಂಡಿಕೇಟ್ ಸದಸ್ಯರು,
ಬೆಂಗಳೂರು ನಗರ ವಿಶ್ವವಿದ್ಯಾನಿಲಯ,
ಬೆಂಗಳೂರು-560001

ಮಾನ್ಯರೆ,

ವಿಷಯ: ದಿನಾಂಕ: 31.07.2023 ರಂದು ಜರುಗಿದ ಸಿಂಡಿಕೇಟ್ 22ನೇ ಸಾಮಾನ್ಯ ಸಭೆಯ ನಡವಳಿಗಳು.

****

ದಿನಾಂಕ: 31.07.2023 ರಂದು ಪೂರ್ವಾಹ್ನ 11.00 ಗಂಟೆಗೆ ಜರುಗಿದ ಸಿಂಡಿಕೇಟ್ 22ನೇ ಸಾಮಾನ್ಯ ಸಭೆಯ ನಡವಳಿಗಳನ್ನು ಮಾನ್ಯ ಕುಲಪತಿಗಳು ಅನುಮೋದಿಸಿದಂತೆ, ಬೆಂಗಳೂರು ವಿಶ್ವವಿದ್ಯಾಲಯದ ಪರಿನಿಯಮಾವಳಿ 5.16 ರನ್ವಯ ಕಳುಹಿಸುತ್ತಿದ್ದೇನೆ.

ನಡವಳಿಗಳನ್ನು ರವಾನಿಸಿದ ದಿನಾಂಕದಿಂದ ಏಳು ದಿನಗಳೊಳಗಾಗಿ ಸಭೆಯಲ್ಲಿ ಹಾಜರಿದ್ದ ಸದಸ್ಯರು, ನಡವಳಿಗಳ ಬಗ್ಗೆ ಯಾವುದೇ ಆಕ್ಷೇಪಣೆಯನ್ನು ಕಳುಹಿಸದಿದ್ದಲ್ಲಿ, ಮೇಲೆ ಹೇಳಿದ ಪರಿನಿಯಮಾವಳಿಗಳ ಅನುಸಾರ ಅವುಗಳನ್ನು ಸ್ಥಿರೀಕರಿಸಲಾಗಿದೆ ಎಂದು ಪರಿಗಣಿಸಲಾಗುವುದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಕುಲಸಚಿವರು

ಅಡಕ: ಮೇಲಿನಂತೆ

ಪ್ರತಿಗಳು:

1. ರಾಜ್ಯಪಾಲರ ವಿಶೇಷ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – 560 001.
2. ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ), ಕರ್ನಾಟಕ ಸರ್ಕಾರ, ಬೆಂಗಳೂರು
3. ಕುಲಪತಿಗಳು, ಕುಲಸಚಿವರು, ಕುಲಸಚಿವರು (ಮೌಲ್ಯಮಾಪನ), ವಿತ್ತಾಧಿಕಾರಿಗಳ ಆಪ್ತ ಕಾರ್ಯದರ್ಶಿಗಳಿಗೆ, ಬೆಂ.ನ.ವಿ.

ಬೆಂಗಳೂರು ನಗರ ವಿಶ್ವವಿದ್ಯಾನಿಲಯ **BENGALURU CITY UNIVERSITY**

Office of the Registrar, Central College Campus, Dr. B.R. Ambedkar Veedhi, Bengaluru – 560 001.
Ph.No.080-22131385, E-mail: registrarbcu@gmail.com

ಸಂಖ್ಯೆ:ಬಿಸಿಯು/ಎಸ್‌ವೈಎನ್-22/ಸಾಮಾನ್ಯ ಸಭೆ/111 /2023-24 ದಿನಾಂಕ: 03.08.2023.

ದಿನಾಂಕ 31.07.2023 ರಂದು ಪೂರ್ವಾಹ್ನ 11.00 ಗಂಟೆಗೆ ಬೋರ್ಡ್‌ರೂಮ್, ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು 560 001 ಇಲ್ಲಿ ಜರುಗಿದ ಸಿಂಡಿಕೇಟ್ 22ನೇ ಸಾಮಾನ್ಯ ಸಭೆಯ ನಡವಳಿಗಳು.

**ಸಭೆಯಲ್ಲಿ ಹಾಜರಿದ್ದ ಸದಸ್ಯರು:**

| | | |
|---|---|---|
| 1. | ಪ್ರೊ. ಲಿಂಗರಾಜ ಗಾಂಧಿ<br>ಕುಲಪತಿಗಳು, | ಸಭಾಧ್ಯಕ್ಷರು |
| 2. | ಶ್ರೀ ಎಂ. ವಿ. ರಂಗಪ್ಪ | ಸದಸ್ಯರು |
| 3. | ಶ್ರೀ. ಸಮರ್ಥ ಮುನಿರಾಜು | ಸದಸ್ಯರು |
| 4. | ಪ್ರೊ. ಕೆ. ಎಂ.ಮಹೇಶ್ | ಸದಸ್ಯರು |
| 5. | ಶ್ರೀ ಸತೀಶ್ ಎಂ | ಸದಸ್ಯರು |
| 6. | ಡಾ. ಸಿ. ಎಂ. ನವೀನ್‌ಕುಮಾರ್ | ಸದಸ್ಯರು |
| 7. | ಡಾ. ಎಸ್. ಹರಿಪ್ರಸಾದ್ | ಸದಸ್ಯರು |
| 8. | ಡಾ. ವಿ. ಲೋಕೇಶ್<br>ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 9. | ಶ್ರೀ ಜವರೇಗೌಡ ಟಿ, ಕೆ.ಎ.ಎಸ್<br>ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |

ಸಭೆಯ ಪ್ರಾರಂಭದಲ್ಲಿ 6 ಜನ ಸದಸ್ಯರು, ಉಪಸ್ಥಿತರಿರುವುದರಿಂದ ಕೋರಂ ಅಭಾವದ ಕಾರಣದಿಂದಾಗಿ ಸಭಾಧ್ಯಕ್ಷರು ಸಭೆಯನ್ನು 10 ನಿಮಿಷಗಳ ಕಾಲ ಮುಂದೂಡಿದರು. ನಂತರ ಇನ್ನು ಇಬ್ಬರು ಸದಸ್ಯರಾದ ಶ್ರೀ ಕೆ.ಎಂ. ಮಹೇಶ್ ಮತ್ತು ಡಾ. ಸಿ.ಎಂ. ನವೀನ್‌ಕುಮಾರ್ ರವರ ಹಾಜರಾತಿಯ ಖಚಿತಪಡಿಸಿಕೊಂಡು ಸಭೆಯನ್ನು ಪ್ರಾರಂಭಿಸಲಾಯಿತು.

ಕುಲಸಚಿವರು ಸಭಾಧ್ಯಕ್ಷರನ್ನು ಮತ್ತು ಉಪಸ್ಥಿತರಿದ್ದ ಎಲ್ಲ ಸದಸ್ಯರನ್ನು 22ನೇ ಸಿಂಡಿಕೇಟ್ ಸಾಮಾನ್ಯ ಸಭೆಗೆ ಸ್ವಾಗತಿಸಿ, ಪ್ರಸ್ತಾವಿಕ ನುಡಿಗಳೊಂದಿಗೆ ಸಭೆಗೆ ಚಾಲನೆ ನೀಡಲು ಸಭಾಧ್ಯಕ್ಷರನ್ನು ವಿನಂತಿಸಿದರು.

ನಂತರ ಸಭಾಧ್ಯಕ್ಷರಾದ ಮಾನ್ಯ ಕುಲಪತಿಗಳು ಎಲ್ಲ ಸದಸ್ಯರಿಗೆ ಸ್ವಾಗತ ಕೋರಿ ಕಳೆದ ಸಭೆಯಿಂದ ಇಲ್ಲಿಯವರೆಗೆ ವಿಶ್ವವಿದ್ಯಾನಿಲಯದಲ್ಲಿ ಜರುಗಿದ ಪ್ರಮುಖ ಚಟುವಟಿಕೆಗಳ ಕುರಿತು ಸಭೆಗೆ ವಿವರಿಸಿದರು.

1. ಕೆ.ಎ.ಎಸ್ ಆಯ್ಕೆ ಶ್ರೇಣಿ, ಅಧಿಕಾರಿಗಳಾದ ಶ್ರೀ ಜವರೇಗೌಡ ಟಿ. ರವರು ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಕುಲಸಚಿವರು (ಆಡಳಿತ) ರಾಗಿ ಸರ್ಕಾರದಿಂದ ವರ್ಗಾವಣೆ ಹೊಂದಿ ದಿನಾಂಕ 18.07.2023 ರ ಅಪರಾಹ್ನ ಕರ್ತವ್ಯಕ್ಕೆ ವರದಿ ಮಾಡಿಕೊಂಡಿದ್ದಾರೆ ಅವರನ್ನು ಸಿಂಡಿಕೇಟ್ ಸಭೆಗೆ ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ ಹಾಗೂ ಶ್ರೀ ಸಿ. ಎನ್. ಶ್ರೀಧರ ಕೆ.ಎ.ಎಸ್ (ಸೂಪರ್ ಟೈಮ್ ಸ್ಕೇಲ್) ರವರು ವಿಶ್ವವಿದ್ಯಾಲಯದಲ್ಲಿ ಕುಲಸಚಿವರಾಗಿ ಸೇವೆ ಸಲ್ಲಿಸಿ ದಿನಾಂಕ 30.06.2023 ರಂದು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ (ಚೆಸ್ಕಾಂ) ಮೈಸೂರು ಇಲ್ಲಿಗೆ ವ್ಯವಸ್ಥಾಪಕ ನಿರ್ದೇಶಕರಾಗಿ ವರ್ಗಾವಣೆ ಹೊಂದಿ ಕರ್ತವ್ಯದಿಂದ ಬಿಡುಗಡೆ ಹೊಂದಿದ್ದಾರೆ ಅವರು ತಮ್ಮ ಅವಧಿಯಲ್ಲಿ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ಸೇವೆಯನ್ನು ಸ್ಮರಿಸಿ ಗೌರವಿಸಿ ದಾಖಲಿಸಲಾಗುವುದೆಂದು ತಿಳಿಸಿದರು.

2. 14 ಸ್ಥಳಿಯ ವಿಚಾರಣಾ ಸಮಿತಿಗಳು ಸಲ್ಲಿಸಿದ ವರದಿಗಳ ಆಧಾರದ ಮೇಲೆ 2023-24ನೇ ಸಾಲಿಗೆ ಹೊಸ ಮಹಾವಿದ್ಯಾಲಯಗಳನ್ನು ಪ್ರಾರಂಭಿಸಲು / ಹೊಸ ಕೋರ್ಸು / ಹೊಸ ವಿಷಯ / ಹೆಚ್ಚುವರಿ ಪ್ರವೇಶ ಸಂಖ್ಯೆ/ ಮಹಾವಿದ್ಯಾಲಯದ ಹೆಸರು ಬದಲಾವಣೆ ಮುಂತಾದ ಪ್ರಸ್ತಾವನೆಗಳನ್ನು ದಿನಾಂಕ 17.07.2023 ರಂದು ಸರ್ಕಾರಕ್ಕೆ ಸಲ್ಲಿಸಲಾಗಿದೆ.

3. ದಿನಾಂಕ 17.07.2023 ರಿಂದ 23.07.2023 ರವರೆಗೆ ಯು.ಕೆ ದೇಶದ ವೊಲ್ವರ್‌ಹ್ಯಾಂಪ್ಟನ್ ವಿಶ್ವವಿದ್ಯಾಲಯಕ್ಕೆ ಸಂದರ್ಶಕ ವಿದ್ವಾಂಸರಾಗಿ ಆ ವಿಶ್ವವಿದ್ಯಾಲಯ "Sustainable SMART Cities Coping with Crisis" ಯೋಜನೆಯಲ್ಲಿ ಪಾಲ್ಗೊಂಡು ತಮ್ಮ ಜ್ಞಾನವನ್ನು ಹಂಚಿಕೊಂಡಿರುವುದಾಗಿ ತಿಳಿಸಿದರು. ಈ ಭೇಟಿಯ ಎಲ್ಲ ಖರ್ಚು ವೆಚ್ಚಗಳನ್ನು ವೊಲ್ವರ್‌ಹ್ಯಾಂಪ್ಟನ್ ವಿಶ್ವವಿದ್ಯಾನಿಲಯದವರು ಭರಿಸಿದ್ದು, ಬೆಂಗಳೂರು ನಗರ ವಿಶ್ವವಿದ್ಯಾನಿಲಯಕ್ಕೆ ಯಾವುದೇ ಹಣಕಾಸಿನ ಬಾಧ್ಯತೆ ಇರುವುದಿಲ್ಲವೆಂದು ತಿಳಿಸಿ, ಈ ಶೈಕ್ಷಣಿಕ / ಸಂಶೋಧನಾ ಭೇಟಿಗಾಗಿ ಗೌರವಾನ್ವಿತ ರಾಜ್ಯಪಾಲರ ಅನುಮೋದನೆಯಾಗಿ ರಾಜಭವನದಿಂದ ಆದೇಶ ಹೊರಡಿಸಲಾಗಿದೆ ಎಂದು ತಿಳಿಸಿದರು.

   ಈ ಸಂದರ್ಭದಲ್ಲಿ, ವೊಲ್ವರ್‌ಹ್ಯಾಂಪ್ಟನ್ ವಿಶ್ವವಿದ್ಯಾಲಯದ ಕುಲಪತಿಗಳು ಹಾಗೂ ಅಲ್ಲಿಯ ಶಿಕ್ಷಣ ತಜ್ಞರು ನಮ್ಮ ವಿಶ್ವವಿದ್ಯಾನಿಲಯದ ಕೋರ್ಸುಗಳು, ಶಿಕ್ಷಣ ಕ್ರಮ, ಪಠ್ಯಕ್ರಮಗಳಲ್ಲಿ ಆಸಕ್ತಿ ವ್ಯಕ್ತಪಡಿಸಿ ಕೆಲವು ಒಡಂಬಡಿಕೆಗಳನ್ನು ಮಾಡಿಕೊಳ್ಳಲು ಉತ್ಸುಕತೆ ತೋರಿಸಿದ್ದಾರೆ. ಎರಡೂ ವಿಶ್ವವಿದ್ಯಾಲಯಗಳು ಜಂಟಿಯಾಗಿ, ಸಂಶೋಧನಾ ಯೋಜನೆಗಳು, ಸಂಶೋಧನಾ ಪ್ರಬಂಧ / ಪತ್ರಿಕೆಗಳ ಪ್ರಕಟಣೆ, ಜಂಟಿಯಾಗಿ ಪಿ.ಎಚ್.ಡಿ ವಿದ್ಯಾರ್ಥಿಗಳ ಮಾರ್ಗದರ್ಶನ, ಅಲ್ಪಾವಧಿ ಕಾರ್ಯಕ್ರಮಗಳು, ಸ್ಟಾರ್ಟ್-ಅಪ್ ಇನ್‌ಕ್ಯೂಬೇಟರಗಳ, ಬೇಸಿಗೆ ಶಿಬಿರ (Summer School) ವಿದ್ಯಾರ್ಥಿ ಮತ್ತು ಶಿಕ್ಷಕರ ಪರಸ್ಪರ ವಿನಿಯೋಗ, ಜಂಟಿ ವ್ಯಾಸಂಗ, ಸಹಭಾಗಿತ್ವ ಮುಂತಾದ ವಿಷಯಗಳ ಕುರಿತು ಕಾರ್ಯ ನಿರ್ವಹಿಸಲು ಎರಡೂ ವಿಶ್ವವಿದ್ಯಾಲಯಗಳ ಕುಲಪತಿಗಳು ಒಡಂಬಡಿಕೆಗೆ ಸಹಿ ಹಾಕಿದ್ದು ಇದರಿಂದ ಮುಂಬರುವ ದಿವಸಗಳಲ್ಲಿ ಸಂಶೋಧನೆ ಹಾಗೂ ವ್ಯಾಸಂಗಕ್ಕೆ ಹೆಚ್ಚಿನ ಪ್ರೋತ್ಸಾಹ ದೊರಯಲಿದೆ.

ಮುಂದಿನ ತಿಂಗಳು 11ನೇ ದಿನಾಂಕದಂದು (11.08.2023), ವ್ಯೊಲ್ವರ್‌ಹ್ಯಾಂಪ್ಟನ್ ವಿಶ್ವವಿದ್ಯಾಲಯ, ಬೆಂಗಳೂರು ನಗರ ವಿಶ್ವವಿದ್ಯಾನಿಲಯ ಮತ್ತು ಯು.ಕೆ. ದೇಶದ ಎನ್.ಹೆಚ್.ಎಸ್ (NHS) ಒಟ್ಟುಗೂಡಿ ಭಾರತ ಸರ್ಕಾರದ ಆಯುಷ್ಮಾನ್ ಭಾರತ ಯೋಜನೆಗೆ ಸಂಬಂಧಿಸಿದಂತೆ ಡಿಜಿಟಲ್ ಸಂಪನ್ಮೂಲಗಳ ಬಳಕೆ ಕುರಿತು ಒಂದು ದಿವಸದ Webinar ಆಯೋಜಿಸಲಾಗುತ್ತಿದ್ದು, ಆಸಕ್ತ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಇದರಲ್ಲಿ ಭಾಗವಹಿಸಲು. ಅಗತ್ಯ ಲಿಂಕ್ ಈಗಾಗಲೇ ಎಲ್ಲ ಮಹಾವಿದ್ಯಾಲಯಗಳು ಹಾಗೂ ವಿಭಾಗಗಳಿಗೆ ಒದಗಿಸಲಾಗಿದೆ ಎಂದು ಹೇಳಿದರು

4. ವಿಶ್ವವಿದ್ಯಾನಿಲಯದ 2ನೇ ಘಟಿಕೋತ್ಸವ ಯಶಸ್ವಿಯಾಗಿ ನೇರವೇರಿರುವ ಸಂತೋಷದ ಸಂದರ್ಭವನ್ನು ವಿಶ್ವವಿದ್ಯಾನಿಲಯದ ಸಿಂಡಿಕೇಟ್, ವಿದ್ಯಾವಿಷಯಕ ಪರಿಷತ್ ಸದಸ್ಯರು, ಅತಿಥಿ ಉಪನ್ಯಾಸಕರು, ಹೊರಗುತ್ತಿಗೆ ಸಿಬ್ಬಂದಿ ಒಳಗೊಂಡಂತೆ ಎಲ್ಲ ಅಧ್ಯಾಪಕರು, ಅಧ್ಯಾಪಕೇತರ ಸಿಬ್ಬಂದಿ, ಸಮಾಲೋಚಕರು ವಿಶ್ವವಿದ್ಯಾನಿಲಯದ ಎಲ್ಲ ಸಿಬ್ಬಂದಿಗಳಿಗೆ ಅಭಿನಂದನಾ ಸಮಾರಂಭ ಹಾಗೂ ಭೋಜನ ಕೂಟ ಏರ್ಪಡಿಸಿ ನೆನಪಿನ ಕಾಣಿಕೆಗಳನ್ನು ನೀಡಲಾಯಿತು.

5. 2023–24ನೇ ಸಾಲಿನ ಪ್ರಥಮ / ಸೆಮಿಸ್ಟರ್ ತರಗತಿಗಳನ್ನು 31.07.2023 ರಿಂದ ಪ್ರಾರಂಭಿಸಲಾಗುವುದು ಈ ಸಲ ವಿಶ್ವವಿದ್ಯಾನಿಲಯದ ಆವರಣದಲ್ಲಿ ನೀಡುತ್ತಿರುವ ಬಿ.ಕಾಂ ಮತ್ತು ಬಿ.ಸಿ.ಎ ವ್ಯಾಸಂಗಗಳ ಪ್ರವೇಶ ಕೋರಿ ಹೆಚ್ಚಿನ ಸಂಖ್ಯೆಯ ಅರ್ಜಿಗಳು ಬಂದಿದ್ದು, ಬಿ.ಕಾಂ. ಮತ್ತು ಬಿ.ಸಿ.ಎ. ವ್ಯಾಸಂಗಗಳ ಹೆಚ್ಚಿನ ವಿಭಾಗಗಳಿಗೆ ಅಗತ್ಯ ಮೂಲ ಸೌಲಭ್ಯ ಒದಗಿಸಲಾಗಿದೆ. ಹೆಚ್ಚಿನ ಸಂಖ್ಯೆಯ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳುವ ಪ್ರಕ್ರಿಯೆ ಪ್ರಾರಂಭಿಸಲಾಗಿದೆ.

6. V & VI ಸೆಮಿಸ್ಟರ್ ವಿದ್ಯಾರ್ಥಿಗಳ ವ್ಯಾಸಂಗಕ್ಕಾಗಿ ಕೆ.ಎಸ್.ಎಚ್.ಇ.ಸಿ ರಚಿಸಿದ ತಜ್ಞರ ಸಮಿತಿ ಸಿದ್ಧಪಡಿಸಿದ ವಿವಿಧ ವಿಷಯಗಳ ಮಾದರಿ ಪಠ್ಯಕ್ರಮಗಳ ಆಧಾರದ ಮೇಲೆ ವಿಶ್ವವಿದ್ಯಾನಿಲಯದ ಆಯಾಯ ಅಧ್ಯಯನ ಮಂಡಳಿಗಳಿಗೆ ಪಠ್ಯಕ್ರಮವನ್ನು ಸಿದ್ಧಪಡಿಸಲು ಸೂಚಿಸಲಾಗಿದೆ, ಎಂದು ತಿಳಿಸಿ ಕಾರ್ಯಸೂಚಿಯಂತೆ ವಿಷಯಗಳನ್ನು ಮಂಡಿಸಲು ಸದಸ್ಯ ಕಾರ್ಯದರ್ಶಿಗಳಾದ ಕುಲಸಚಿವರಿಗೆ ಸೂಚಿಸಿದರು.

**ವಿಷಯ ಸಂಖ್ಯೆ: 1**

**ವಿಷಯ:** ದಿನಾಂಕ 15.03.2023 ರಂದು ಜರುಗಿದ ಸಿಂಡಿಕೇಟ್ 21ನೇ ಸಾಮಾನ್ಯ ಸಭೆ, ದಿನಾಂಕ 23.05.2023 ರಂದು ಜರುಗಿದ ಸಿಂಡಿಕೇಟ್ ಅಸಾಮಾನ್ಯ ಸಭೆ, ದಿನಾಂಕ 21.06.2023 ಮತ್ತು ದಿನಾಂಕ 29.06.2023 ಪತ್ರದಲ್ಲಿ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯರ ಆನ್–ಲೈನ್ ಪರಿಚಲನೆಯ ಮುಖಾಂತರ ಅಭಿಪ್ರಾಯ ಪಡೆದು ದಾಖಲಿಸಿದ ನಡವಳಿಗಳು, ದಿನಾಂಕ 07.07.2023 ರಂದು ಮತ್ತು ದಿನಾಂಕ 13.07.2023 ರಂದು ಜರುಗಿದ ಸಿಂಡಿಕೇಟ್ ಅಸಾಮಾನ್ಯ ಸಭೆಗಳ ದೃಢೀಕೃತ ನಡವಳಿಗಳ ಮೇಲೆ ಕೈಗೊಂಡ ಅನುಪಾಲನಾ ವರದಿ

<u>ಸಿಂಡಿಕೇಟ್ ತೀರ್ಮಾನ:</u>

**ದಿನಾಂಕ 15.03.2023 ರಂದು ಜರುಗಿದ ಸಿಂಡಿಕೇಟ್ 21ನೇ ಸಾಮಾನ್ಯ ಸಭೆ, ದಿನಾಂಕ 23.05.2023 ರಂದು ಜರುಗಿದ ಸಿಂಡಿಕೇಟ್ ಅಸಾಮಾನ್ಯ ಸಭೆ, ದಿನಾಂಕ 21.06.2023 ಹಾಗೂ ದಿನಾಂಕ 29.06.2023**

ಪತ್ರದಲ್ಲಿ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯರ ಆನ್-ಲೈನ್ ಪರಿಚಲನೆಯ ಮುಖಾಂತರ ಅಭಿಪ್ರಾಯ ಪಡೆದು ದಾಖಲಿಸಿದ ನಡವಳಿಗಳು, ದಿನಾಂಕ 07.07.2023 ರಂದು ಮತ್ತು ದಿನಾಂಕ 13.07.2023 ರಂದು ಜರುಗಿದ ಸಿಂಡಿಕೇಟ್ ಅಸಾಮಾನ್ಯ ಸಭೆಗಳ ದೃಢೀಕೃತ ನಡವಳಿಗಳ ಮೇಲೆ ಕೈಗೊಂಡ ಅನುಪಾಲನಾ ವರದಿಗಳನ್ನು ಪರಿಶೀಲಿಸಿ ಅನುಮೋದಿಸಲಾಯಿತು.

ವಿಷಯ ಸಂಖ್ಯೆ- 2

**ವಿಷಯ:** ಮಾರ್ಚ್/ಏಪ್ರಿಲ್ 2023 ರಲ್ಲಿ ನಡೆದ ಸ್ನಾತಕ ಪರೀಕ್ಷೆಯಲ್ಲಿ Malpractice ಮಾಡಿದ ವಿದ್ಯಾರ್ಥಿಗಳ ಮೇಲೆ ತೆಗೆದುಕೊಳ್ಳಲಾಗಿರುವ ಕ್ರಮದ ಬಗ್ಗೆ ಸಿಂಡಿಕೇಟ್ ಅನುಮೋದನೆ ಪಡೆಯುವ

*ಪರಾಮರ್ಶಕ ಟಿಪ್ಪಣಿ:*

ಬೆಂಗಳೂರು ನಗರ ವಿಶ್ವವಿದ್ಯಾಲಯಕ್ಕೆ ಸಂಯೋಜನೆಗೊಂಡಿರುವ 19 ಕಾಲೇಜುಗಳ ವಿದ್ಯಾರ್ಥಿಗಳು ಮಾರ್ಚ್/ಏಪ್ರಿಲ್ 2023 ರಲ್ಲಿ ನಡೆದ ಸ್ನಾತಕ ಪರೀಕ್ಷೆಗಳಲ್ಲಿ Malpractice ಮಾಡಿರುವುದು ವಿಚಕ್ಷಣದಳ ಪತ್ತೆ ಮಾಡಿ ವರದಿ ಮಾಡಿರುತ್ತಾರೆ. ವಿಚಕ್ಷಣದಳ ಮಾಡಿರುವ ವರದಿಯನ್ನು Malpractice Enquiry Committee ಮುಂದೆ ಮಂಡಿಸಲಾಗಿತ್ತು. ಸಮಿತಿಯು ಕೂಲಂಕುಶವಾಗಿ ದೂರುಗಳನ್ನು ಪರಿಶೀಲಿಸಿ, ಸಂಬಂಧಪಟ್ಟ ವಿದ್ಯಾರ್ಥಿಗಳಿಗೆ ಲಿಖಿತವಾಗಿ ಇ-ಮೇಲ್ ಮೂಲಕ ದೂರುಗಳ ಬಗ್ಗೆ ವಿದ್ಯಾರ್ಥಿಗಳ ಅಭಿಪ್ರಾಯ/ಒಪ್ಪಿಗೆ ಕೋರಿ ಪತ್ರ ಕಳುಹಿಸಲಾಗಿತ್ತು. ಇದಕ್ಕೆ ಉತ್ತರವಾಗಿ 43 ವಿದ್ಯಾರ್ಥಿಗಳಲ್ಲಿ 36 ವಿದ್ಯಾರ್ಥಿಗಳು, ಅವರು ಮಾಡಿದ ತಪ್ಪನ್ನು ಒಪ್ಪಿಕೊಂಡು ಲಿಖಿತವಾಗಿ ಪತ್ರಗಳನ್ನು ಸಲ್ಲಿಸಿರುತ್ತಾರೆ ಹಾಗೂ ದಿನಾಂಕ 03.06.2023 ರಂದು ನಡೆದ Malpractice Enquiry Committee ಸಭೆಯ ಮುಂದೆ ಹಾಜರಾಗಿರುತ್ತಾರೆ. ಇನ್ನುಳಿದ 07 ವಿದ್ಯಾರ್ಥಿಗಳು ಇ-ಮೇಲ್ ಮೂಲಕ ಕಳುಹಿಸಿರುವ ಪತ್ರಕ್ಕೆ ಉತ್ತರಿಸಿಲ್ಲ. ಹಾಗೂ ಗೈರು ಹಾಜರಾಗಿರುತ್ತಾರೆ. ಈ ಎಲ್ಲಾ ವಿವರಗಳನ್ನು ದಿನಾಂಕ 03.06.2023 ರಂದು ನಡೆದ Malpractice Enquiry Committee ಸಭೆಯ ಮುಂದೆ ಮಂಡಿಸಲಾಗಿತ್ತು. ಸಭೆಯು ಬೆಂಗಳೂರು ನಗರ ವಿಶ್ವವಿದ್ಯಾಲಯದ ಪರೀಕ್ಷಾ ಕೈಪಿಡಿ-2018ರಲ್ಲಿ ಅಧ್ಯಾಯ 16 ರಲ್ಲಿನ Schedule of Penalties ಕ್ರಮ ಸಂಖ್ಯೆ 02 ರಲ್ಲಿ ವಿವರಿಸಿರುವಂತೆ ದಂಡ ವಿಧಿಸಲು ಶಿಫಾರಸು ಮಾಡಿರುತ್ತದೆ.

**ವಿಷಯ: ವಾಣಿಜ್ಯ ವಿಭಾಗ**

| Sl No | Course and Subject Details | Student Details | Nature of Malpractice committed by students | Students Replay for the Charges Framed | Penalty imposed |
|---|---|---|---|---|---|
| 01 | Vignesh.M.D<br>B.COM, 3rd Semester<br>*Reg.No:*C2027526<br>Vijaya Evening College<br>College Code:1828 | *Subject Name:*Financial Management<br>*QP Code:*34322 | Hand written slip. | Student accepted the Malpractice Committed by him. | To deny the benefit of performance of the Examination for which the candidate has appeared with penalty of Rs. 5000/- |
| 02 | Nithin.N<br>B.COM, 1st Semester<br>*Reg No:*C191445<br>CB Bhandari Jain College | *Subject Name:*<br>English<br>*QP Code:*34101 | Printed Book Pages | **Absent** | To deny the benefit of performance of the Examination for which the candidate has appeared |

| | | | | | |
|---|---|---|---|---|---|
| | College Code:1809 | | | | with penalty of Rs. 10,000/- |
| 03 | Shivaraju.S<br>B.COM, 5th Semester<br>Reg No: C2027503<br>Vijaya Evening College<br>College Code:1828 | *Subject Name:*<br>*Income Tax*<br>*QP Code:34521* | 28 micro xerox Chitts | Student accepted the Malpractice Committed by him. | To deny the benefit of performance of the Examination for which the candidate has appeared with penalty of Rs. 5000/ |
| 04 | Ravi.S<br>B.Com, 3rdSemester<br>Reg No: C1832332<br>BES College<br>College Code:2403 | *Subject Name:*<br>*Corporate Accounting*<br>*QP Code:13321* | Hand written 06 slip and Mobile Phone | Student accepted the Malpractice Committed by him. | To deny the benefit of performance of the Examination for which the candidate has appeared with penalty of Rs. 5000/ |
| 05 | Dennys.A<br>B.COM, 1stSemester<br>Reg No: C1826879<br>Vijaya College<br>College Code:1827 | *Subject Name:*<br>*Kannada*<br>*QP Code:13102* | Chitts | Student accepted the Malpractice Committed by him. | To deny the benefit of performance of the Examination for which the candidate has appeared with penalty of Rs. 5000/ |
| 06 | Dhanush.P.Poojary<br>B.COM, 1st Semester<br>Reg No:C1826883<br>Vijaya College<br>College Code:1827 | *Subject Name:*<br>*Kannada*<br>*QP Code:13102* | Chitts | Student accepted the Malpractice Committed by him. | To deny the benefit of performance of the Examination for which the candidate has appeared with penalty of Rs. 5000/ |
| 07 | Vinod Kumar.G<br>B.COM, 1st Semester<br>Reg No.C1827206<br>Vijaya College<br>College Code:1827 | *Subject Name*<br>*Kannada*<br>*QP Code:13102* | Chitts | Student accepted the Malpractice Committed by him. | To deny the benefit of performance of the Examination for which the candidate has appeared with penalty of Rs. 5000/ |
| 08 | Jay Praksh.A.Mohanthy<br>B.COM, 3rd Semester<br>Reg No:C1910073<br>APS College of Commerce<br>College Code:1002 | *Subject Name*<br>*Hindi*<br>*QP Code:34303* | Copy from Mobile and Chits | Student accepted the Malpractice Committed by him. | To deny the benefit of performance of the Examination for which the candidate has appeared with penalty of Rs. 5000/ |
| 09 | Mohan Shyam Beri<br>B.COM, 3rd Semester<br>Reg No.C1910431<br>APS College of Commerce Evening<br>College Code:1003 | *Subject Name*<br>*Kannada*<br>*QP Code:13302* | Chitts | Student accepted the Malpractice Committed by him. | To deny the benefit of performance of the Examination for which the candidate has appeared with penalty of Rs. 5000/ |
| 10 | Revathy.M<br>B.COM, 3rd Semester<br>Reg No.C1920210<br>Sitadevi Ratan Chand Nahar College<br>College Code:1609 | *Subject Name*<br>*Kannada*<br>*QP Code:13302* | Printed Book Pages | Student accepted the Malpractice Committed by her. | To deny the benefit of performance of the Examination for which the candidate has appeared with penalty of Rs. 5000/- |
| 11 | Devanand.S<br>B.COM, 3rd Semester<br>Reg No.C1992161<br>Sitadevi Ratan Chand Nahar College, Chamrajpet<br>College Code:1609 | *Subject Name*<br>*Kannada*<br>*QP Code:13302* | Chitts | Student accepted the Malpractice Committed by him. | To deny the benefit of performance of the Examination for which the candidate has appeared with penalty of Rs. 5000/- |
| 12 | Uday Kumar.S<br>Reg No.C2034119<br>V.E.T First Grade College<br>College Code:2413 | *Subject Name*<br>*Regulatory Frame Work of Banking*<br>*QP Code:34531* | Caught by micro xerox | Student accepted the Malpractice Committed by him. | To deny the benefit of performance of the Examination for which the candidate has appeared with penalty of Rs. 5000/- |
| 13 | Kiran.R<br>B.COM, 5th Semester<br>Reg No.C2034050<br>V.E.T First Grade College<br>College Code:2413 | *Subject Name*<br>*Regulatory Frame Work of Banking*<br>*QP Code:34531* | Chitts | Student accepted the Malpractice Committed by him. | To deny the benefit of performance of the Examination for which the candidate has appeared with penalty of Rs. 5000/- |

| | | | | | |
|---|---|---|---|---|---|
| 14 | Chethan.M<br>B.COM, 1st Semester<br>Reg No.C1915617<br>International Institute of Business Studies<br>College Code:1408 | *Subject Name*<br>*Corporate Structure and Administration*<br>*QP Code:34124* | Hand Written Chits (2 Pages) | **Absent** | To deny the benefit of performance of the Examination for which the candidate has appeared with penalty of Rs. 10,000/- |
| 15 | Alam Joseph<br>BCOM, 3rd Semester<br>Reg No.C1849001<br>Adithya Institute Of Management and research<br>College Code:3405 | *Subject Name*<br>*Quantitative Analysis for business Decision*<br>*QP Code:13324* | Caught by 04 micro xerox scripts (Slips found) | **Absent** | To deny the benefit of performance of the Examination for which the candidate has appeared with penalty of Rs. 10,000/- |
| 16 | Hemanth Kumar. M. J<br>BCOM, 3rd Semester<br>Reg No.C1834513 Vijaya College, College Code:2414 | *Subject Name*<br>*Business Ethics*<br>*QP Code:13323* | micro xerox Paper | Student accepted the Malpractice Committed by him. | To deny the benefit of performance of the Examination for which the candidate has appeared with penalty of Rs. 5000/- |
| 17 | Manoj. S<br>BCOM, 3rd Semester<br>Reg No.C1834563 Vijaya College, College Code:2414 | *Subject Name Business Ethics*<br>*QP Code:13323* | micro xerox Paper | **Absent** | To deny the benefit of performance of the Examination for which the candidate has appeared with penalty of Rs. 10,000/- |
| 18 | Shreyas.K.N<br>BCOM, 1st Semester<br>Reg No.C2039175<br>Vivekananda Degree College<br>College Code:2622 | *Subject Name*<br>*Political & Skill Development*<br>*QP Code:34125* | Chitts | Student accepted the Malpractice Committed by him. | To deny the benefit of performance of the Examination for which the candidate has appeared with penalty of Rs. 5000/- |
| 19 | Vusuri Vivek<br>BBA, 3rd Semester<br>Reg No.B1916218<br>Jain College<br>College Code:1814 | *Subject Name*<br>*Corporate Financial Managment*<br>*QP Code:35326* | Hand Written Chits on the Hall Ticket | Student accepted the Malpractice Committed by him. | To deny the benefit of performance of the Examination for which the candidate has appeared with penalty of Rs. 5000/- |
| 20 | Abhi Y.K<br>BBA<br>1stSemester(NEP)<br>Reg No. U18DR22M0031<br>Jnana Jyothi Degree college<br>College Code:1814 | *Subject Name*<br>*Accounting for Every one*<br>*QPCode:OEBC111* | Chitts | Student accepted the Malpractice Committed by him. | To deny the benefit of performance of the Examination for which the candidate has appeared with penalty of Rs. 5000/- |

## ವಿಷಯ: ವಿಜ್ಞಾನ ವಿಭಾಗ

| Sl No | Course and Subject Details | Student Details | Nature of Malpractice committed by students | Students Replay for the Charges Framed | Penalty imposed |
|---|---|---|---|---|---|
| 01 | Sanober Sultana<br>BSC, 5th Semester<br>Reg No:S2011026<br>Al-Ameen Arts, Science and Commerce<br>College Code:1802 | *Subject Name:*<br>Physics<br>*QP Code*:12522 | Copied from Hand Written Calculator on Cover. | Student accepted the Malpractice Committed by him. | To deny the benefit of performance of the examination for which the candidate has appeared with penalty of Rs. 5000/- |
| 02 | Nishu Saini<br>BCA<br>5th Semester<br>Reg No.R1914208<br>V.V.Puram Science College<br>College Code:1824 | *Subject Name*<br>*Artificial Intelligence(AI)*<br>*QP Code:15526* | Hand written slip | Student accepted the Malpractice Committed by him. | To deny the benefit of performance of the examination for which the candidate has appeared with penalty of Rs. 5000/- |

| | | | | | |
|---|---|---|---|---|---|
| 03 | Kishore.B<br>BSC,5th Semester<br>Reg No.S1915695<br>K.L.E, College, Rajajinagar<br>College Code:2804 | *Subject Name*<br>*Physical Chemistry*<br>*QP Code:11524* | Copy with Chitts | Student accepted the Malpractice Committed by him. | To deny the benefit of performance of the examination for which the candidate has appeared with penalty of Rs. 5000/- |
| 04 | Uday.K.S<br>BSC, 5th Semester<br>Reg No.S1915662<br>K.L.E, College, Rajajinagar<br>College Code.2804 | *Subject Name*<br>*Physical Chemistry*<br>*QP Code:11524* | Copy with Chitts | Student accepted the Malpractice Committed by him. | To deny the benefit of performance of the examination for which the candidate has appeared with penalty of Rs. 5000/- |
| 05 | Pradhyumna.D.R<br>BCA, 5th Semester<br>Reg No.R2016220<br>BES College<br>College Code:2403 | *Subject Name*<br>*Operating System*<br>*QP Code:15323* | Chitts& Digital watch | Student accepted the Malpractice Committed by him. | To deny the benefit of performance of the examination for which the candidate has appeared with penalty of Rs. 5000/- |
| 06 | Shashank.S.R<br>BCA, 5th Semester<br>Reg No.R2016226<br>BES College<br>College Code:2403 | *Subject Name*<br>*Operating System*<br>*QP Code:15323* | Chitts | Student accepted the Malpractice Committed by him. | To deny the benefit of performance of the examination for which the candidate has appeared with penalty of Rs. 5000/- |
| 07 | Harsha.R<br>BSC,5th Semester<br>Reg No.S1812327<br>Vijay College<br>College Code:1827 | *Subject Name*<br>*Biotechnology*<br>*QP Code:11556* | Chitts | **Absent** | To deny the benefit of performance of the examination for which the candidate has appeared with penalty of Rs. 10,000/- |
| 08 | Gopi.M<br>BSC, 5th Semester<br>Reg No.A1918418<br>Government First Grade College, Yelahanka<br>College Code:3412 | *Subject Name*<br>*Chemistry*<br>*QP Code:11524* | Caught by 16 micro xerox scripts (Slips found) | Student accepted the Malpractice Committed by him. | To deny the benefit of performance of the examination for which the candidate has appeared with penalty of Rs. 5000/- |
| 09 | Bharath. M.S<br>BSC, 3rd Semester<br>Reg No.S1913044<br>Vijaya College,<br>College Code:2414 | *Subject Name*<br>*Chemistry*<br>*QP Code:11322* | micro xerox Paper | Student accepted the Malpractice Committed by him. | To deny the benefit of performance of the examination for which the candidate has appeared with penalty of Rs. 5000/- |
| 10 | Madhu.N<br>BSC, 5th Semester<br>Reg No.S2013014<br>Vijaya College<br>College Code:2414 | *Subject Name*<br>*Bio Technology*<br>*QP Code:12513* | Caught by 08 micro xerox scripts (Slips found) | Student accepted the Malpractice Committed by him. | To deny the benefit of performance of the examination for which the candidate has appeared with penalty of Rs. 5000/- |
| 11 | Darshan.R<br>BSC, 5th Semester<br>Reg No.S2013051<br>Vijaya College<br>College Code:2414 | *Subject Name*<br>*Bio Technology*<br>*QP Code:12513* | Hand Written Chittson Hall Ticket | Student accepted the Malpractice Committed by him. | To deny the benefit of performance of the examination for which the candidate has appeared with penalty of Rs. 5000/ |
| 12 | Piyush Kumar<br>BSC, 3rd Semester<br>(NEP)<br>Reg No.U18GG21S0345<br>Sheshadripuram First Grade College,<br>College Code:3425 | *Subject Name*<br>*Object Oriented ProgramingUsingComputer Science*<br>*QP Code:DCCS301* | Mobile Phone | **Absent** | To deny the benefit of performance of the examination for which the candidate has appeared with penalty of Rs. 10,000/- |
| 13 | Harshavardhan.S<br>BSC, 1st Semester<br>**(NEP)**<br>Reg No.U18GG22S0059<br>Sheshadripuram First Grade College, Yelahanka<br>College Code:3425 | *Subject Name*<br>*Bio Technology(Cell Biology & genetics)*<br>*QP Code:DCBT101* | Chitts | Student accepted the Malpractice Committed by him. | To deny the benefit of performance of the examination for which the candidate has appeared with penalty of Rs. 5000/- |

| | | | | | |
|---|---|---|---|---|---|
| 14 | Prakash .K<br>BCA, 3rd Semester<br>Reg. No.R2017225<br>Vijaya College,<br>College code: 2414 | *Subject Name*<br>*Operating System*<br>*QP Code: 15323* | Chitts | Student accepted the Malpractice Committed by him. | To deny the benefit of performance of the examination for which the candidate has appeared with penalty of Rs. 5000/- |
| 15 | Suraj Kumar Sahoo<br>BSC, 3rd Semester **(NEP)**<br>Reg. No.U18GG2150353<br>Sheshadripuram First Grade College<br>College code: 3425 | *Subject Name*<br>*Operating System*<br>*QP Code:DCCS301* | Mobile Phone | Student accepted the Malpractice Committed by him. | To deny the benefit of performance of the examination-for which the candidate has appeared with penalty of Rs. 5000/- |

ವಿಷಯ: ಕಲಾ ವಿಭಾಗ

| **Sl No** | **Course&Student Details** | **Subject Details** | **Nature of Malpractice committed by students** | **Students Replay for the Charges Framed** | **Penalty imposed** |
|---|---|---|---|---|---|
| 01 | Likitha.K<br>BA, 5th Semester<br>Reg No.A2013808<br>Bishop Cotton Women College<br>College Code:1808 | *Subject name*<br>*Home Science, Home Development*<br>*QP Code:32548* | Chitts | Student accepted the Malpractice Committed by him. | To deny the benefit of performance of the Examination for which the candidate has appeared with penalty of Rs. 5000/- |
| 02 | Mohan Musha Khan<br>BA, 1st Semester<br>Reg No.A1913427<br>Al-Ameen Arts, Science and Commerce College<br>College Code:1802 | *Subject Name*<br>*Economics*<br>*QP Code:32122* | Chitts | Student accepted the Malpractice Committed by him. | To deny the benefit of performance of the Examination for which the candidate has appeared with penalty of Rs. 5000/- |
| 03 | P. Chandan<br>BA, 5th Semester<br>RegNo.A2019805 Devanga Sangha First Grade College Code:1821 | *Subject Name*<br>*Public Administration*<br>*QP Code:32543* | Hand written Chitts | Student accepted the Malpractice Committed by him. | To deny the benefit of performance of the Examination for which the candidate has appeared with penalty of Rs. 5000/- |
| 04 | Santhosh.K<br>BA, 5th Semester<br>RegNo.A2019807 Devanga Sangha First Grade College Code:1821 | *Subject Name*<br>*Public Administration*<br>*QP Code:32543* | Hand written Chitts | Student accepted the Malpractice Committed by him. | To deny the benefit of performance of the Examination for which the candidate has appeared with penalty of Rs. 5000/- |
| 05 | Lohith.S<br>BA, 1st Semester **(NEP)**<br>Reg No.U18CV22A0056<br>Government First Grade CollegeYelahanka<br>College Code:3412 | *Subject Name*<br>*Basic Concepts in Political Science*<br>*QP Code:DCPS101* | Hand Written Chitts | **Absent** | To deny the benefit of performance of the Examination for which the candidate has appeared with penalty of Rs. 10,000/- |
| 06 | Shivkumar.V<br>BA, 1st Semester **(NEP)**<br>Reg No.U18CV22A0199<br>Government First Grade College, Yelahanka<br>College Code:3412 | *Subject Name Basic Concepts in Political Science*<br>*QP Code:DCPS101* | Hand Written Chitts | Student accepted the Malpractice Committed by him. | To deny the benefit of performance of the Examination for which the candidate has appeared with penalty of Rs. 5000/- |
| 07 | Kiran.V<br>BA, 1St Semester, **(NEP)**<br>Reg No.U18CX21A0235<br>Government Arts College<br>College Code:3203 | *Subject Name*<br>*Digital Fluency*<br>*QP Code:SEDF101* | Caught by 24 micro xerox scripts (Slips found) | Student accepted the Malpractice Committed by him. | To deny the benefit of performance of the Examination for which the candidate has appeared with penalty |

| | | | | | |
|---|---|---|---|---|---|
| | | | | | of Rs. 5000/- |
| 08 | Sujan.R.C<br>BA<br>1st Semester<br>**(NEP)**<br>Reg No.U18CX22A0113<br>Government Arts College<br>College Code:3203 | Subject Name<br>Digital Fluency<br>QP Code: SEDF101 | Caught by 19 micro xerox scripts (Slips found) | Student Admitted the charges | To deny the benefit of performance of the Examination for which the candidate has appeared with penalty of Rs. 5000/- |

Malpractice ಶಿಫಾರಸ್ಸಿನ ಪ್ರಕಾರ ತೆಗೆದುಕೊಳ್ಳಲಾಗಿರುವ ಕ್ರಮದ ಅನುಮೋದನೆಗಾಗಿ ಸಿಂಡಿಕೇಟ್‌ನ ಮುಂದೆ ಮಂಡಿಸಲಾಗಿದೆ.

<u>ವಿವರಣೆ:</u>

ಸದಸ್ಯರಾದ ಶ್ರೀ ಎಂ.ವಿ ರಂಗಪ್ಪನವರು ಪರೀಕ್ಷಾ ಅಕ್ರಮಗಳನ್ನು ಎಸಗಿದ ವಿದ್ಯಾರ್ಥಿಗೆ ಶಿಕ್ಷೆ ನೀಡಲಾಗಿದೆ, ಆದರೆ ಈ ಅಕ್ರಮ ಜರುಗಲು ಅವಕಾಶ ನೀಡಿದ ಕಾಲೇಜಿನ ವಿರುದ್ಧ ಯಾವುದೇ ಕ್ರಮ ಜರುಗಿಸಲು ಶಿಫಾರಸ್ಸು ಮಾಡದಿರುವುದು ಸರಿಯಲ್ಲವೆಂದು ಹೇಳಿ, ಕಾಲೇಜುಗಳ ವಿರುದ್ಧ ಕೂಡ ಕ್ರಮ ಕೈಗೊಳ್ಳಬೇಕೆಂದು ತಿಳಿಸಿದರು. ಸದಸ್ಯರಾದ ಶ್ರೀ ಸತೀಶ್ ಎಂ ಮತ್ತು ಪ್ರೊ. ಕೆ. ಎಂ. ಮಹೇಶ್ ರವರು ಕಾಲೇಜುಗಳ ಹಂತದಲ್ಲಿ ಸಹ ಪರೀಕ್ಷಾ ಅಕ್ರಮ ತಡೆಯಲು ಪೂರಕ ಕ್ರಮಗಳನ್ನು ತೆಗೆದುಕೊಂಡಿರುತ್ತಾರೆ, ಆದಾಗ್ಯೂ ಇನ್ನು ಹೆಚ್ಚಿಗೆ ಜಾಗರೂಕರಾಗಿರಲು ಹಾಗೂ ಕಟ್ಟುನಿಟ್ಟಿನ ಕ್ರಮವಹಿಸಲು ಸೂಚನೆ ನೀಡಬಹುದೆಂದು ತಿಳಿಸಿದರು. ಇದಲ್ಲದೆ ಪ್ರಸ್ತಾವನೆಯಲ್ಲಿ ಒಳಗೊಂಡಿರುವ ವಿದ್ಯಾರ್ಥಿಗಳ ಹೇಳಿಕೆಗಳನ್ನು ಪುರುಷವಾಚಕದಲ್ಲಿ ದಾಖಲಿಸಿದ್ದು ವಿದ್ಯಾರ್ಥಿ / ವಿದ್ಯಾರ್ಥಿನಿಯರ ಕುರಿತು ಸ್ಪಷ್ಟತೆ ಇರಬೇಕೆಂದು ಹೇಳಿದರು.

ಕುಲಪತಿಗಳು ವಿವರಣೆ ನೀಡಿ, ಪರೀಕ್ಷಾ ಕಾರ್ಯಗಳ ಎಲ್ಲ ಆಯಾಮಗಳ ನಿರ್ವಹಣೆಯಲ್ಲಿ ಪಾಲಿಸಬೇಕಾದ ವಿಧಿ ವಿಧಾನ ಹಾಗೂ ನಿಯಮಗಳ ಒಂದು ಸಮಗ್ರ ಪರೀಕ್ಷಾ ಕೈಪಿಡಿಯನ್ನು ಸಿದ್ದಪಡಿಸಲಾಗಿದೆ. ಅದನ್ನು ಅನುಸರಿಸಿ ಪರೀಕ್ಷಾ ಕಾರ್ಯಗಳು ಜರುಗುತ್ತವೆ. ಪರೀಕ್ಷಾ ವಿಭಾಗದ ಕರ್ತವ್ಯ ನಿರ್ವಹಣೆಯ ಮೇಲೆ ವಿಶ್ವವಿದ್ಯಾನಿಲಯದ ಗೌರವ ಅವಲಂಬಿತವಾಗಿದೆ. ಅತ್ಯಂತ ಕಡಿಮೆ ಸಂಖ್ಯೆಯ ಸಿಬ್ಬಂದಿಗಳ ಸಹಾಯದಿಂದ ಪರೀಕ್ಷಾ ಕೆಲಸಗಳು ನಿಯಮಿತವಾಗಿ ಮತ್ತು ನಿಗದಿತವಾಗಿ ಜರುಗುತ್ತಿವೆ. ಸದಸ್ಯರ ಭಾವನೆಯನ್ನು ಗಮನಿಸಲಾಗಿದೆ. ಇಂತಹ ಪರೀಕ್ಷಾ ಆಕ್ರಮಗಳನ್ನು ನಿಯಂತ್ರಿಸಲು ಕಾಲೇಜುಗಳಿಗೆ ಅಗತ್ಯ ಸಲಹೆ ಸೂಚನೆ ಮತ್ತು ನಿರ್ದೇಶನಗಳನ್ನು ಶಿಫಾರಸ್ಸು ಮಾಡಲು ಅವಶ್ಯಕತೆ ಹಾಗೂ ಸಂದರ್ಭಕ್ಕೆ ಅನುಗುಣವಾಗಿ ಸಮಿತಿ ರಚಿಸುವ ಕುರಿತು ಕ್ರಮ ವಹಿಸಲಾಗುವುದು ಎಂದು ತಿಳಿಸಿದರು.

<u>ಸಿಂಡಿಕೇಟ್ ತೀರ್ಮಾನ:</u>

**ಪರೀಕ್ಷಾ ಅಕ್ರಮಗಳ (Examination Malpractices) ಪರಿಶೀಲನಾ ಸಮಿತಿ ಮಾಡಿದ ಶಿಫಾರಸ್ಸುಗಳಿಗೆ ಅನುಮೋದನೆ ನೀಡಲು ತೀರ್ಮಾನಿಸಲಾಯಿತು.**

ವಿಷಯ ಸಂಖ್ಯೆ– 3

ವಿಷಯ: ಡಾ. ತಾಂಡವಗೌಡ ಟಿ.ಎನ್, ಸಹಾಯಕ ಪ್ರಾಧ್ಯಾಪಕರು, ಆಂಗ್ಲ ವಿಭಾಗ ಅವರು ಲಂಡನ್, ಯುನೈಟೆಡ್ ಕಿಂಗಡಮ್‌ನಲ್ಲಿ ನಡೆಯುವ Furthering Higher Education Partnership-UKನಲ್ಲಿ KSHECಯ delegate ಆಗಿ ಭಾಗವಹಿಸಲು ಅನುಮತಿಸುವ ಬಗ್ಗೆ.

ಉಲ್ಲೇಖ:
1. ಕರ್ನಾಟಕ ರಾಜ್ಯದ ಉನ್ನತ ಶಿಕ್ಷಣ ಪರಿಷತ್ ಪತ್ರ ಸಂಖ್ಯೆ:ಕರಾಉಶಿಪ/ H.E.P-UK & Karnataka/ /2023-24 ದಿನಾಂಕ: 27.04.2023.
2. ಡಾ. ತಾಂಡವಗೌಡ ಟಿ.ಎನ್, ಸಹಾಯಕ ಪ್ರಾಧ್ಯಾಪಕರು ಮನವಿ ದಿನಾಂಕ: 03.05.2023.
3. ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ: BCU/EST/OOD/2023-24 ದಿನಾಂಕ: 04.05.2023.

***ಪರಾಮರ್ಶಕ ಟಿಪ್ಪಣಿ:***

ಉಲ್ಲೇಖ (1)ರ ಪತ್ರದಲ್ಲಿ ದಿನಾಂಕ: 28.05.2023ರಿಂದ 10.06.2023ರವರೆಗೆ ಲಂಡನ್, ಯುನೈಟೆಡ್ ಕಿಂಗಡಮ್‌ನಲ್ಲಿ ನಡೆಯಲಿರುವ Furthering Higher Education Partnership-UKನಲ್ಲಿ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಪ್ರತಿನಿಧಿಯಾಗಿ ಡಾ. ತಾಂಡವಗೌಡ ಟಿ.ಎನ್, ಸಹಾಯಕ ಪ್ರಾಧ್ಯಾಪಕರು, ಆಂಗ್ಲ ವಿಭಾಗ ಅವರನ್ನು ನಾಮನಿರ್ದೇಶನ ಮಾಡಿರುವುದಾಗಿ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಕಾರ್ಯನಿರ್ವಾಹಕ ನಿರ್ದೇಶಕರು ತಿಳಿಸಿರುತ್ತಾರೆ. ಇದಕ್ಕೆ ತಗಲುವ ಪ್ರಯಾಣ ಭತ್ಯೆ, ವಸತಿ, ಸ್ಥಳೀಯ ವೆಚ್ಚಗಳನ್ನು ಬ್ರಿಟಿಷ್ ಕೌನ್ಸಿಲ್‌ರವರು ಭರಿಸುವುದಾಗಿ ಸಹ ತಿಳಿಸಿರುತ್ತಾರೆ.

ಉಲ್ಲೇಖ (2)ರಲ್ಲಿ ಡಾ. ತಾಂಡವಗೌಡ ಟಿ.ಎನ್, ಸಹಾಯಕ ಪ್ರಾಧ್ಯಾಪಕರು, ದಿನಾಂಕ: 27.05.2023ರಿಂದ 10.06.2023ರವರೆಗೆ Furthering Higher Education Partnership-UKನಲ್ಲಿ ಭಾಗವಹಿಸಲು ಲಂಡನ್‌ಗೆ OOD ಮೇಲೆ ತೆರಳಲು ಅನುಮತಿ ನೀಡುವಂತೆ ಮನವಿ ಸಲ್ಲಿಸಿರುತ್ತಾರೆ.

ಯುಜಿಸಿ ನಿಯಮಾವಳಿ 2018, 8.1 i(a) ಪ್ರಕಾರ ಒಂದು ಶೈಕ್ಷಣಿಕ ವರ್ಷದಲ್ಲಿ 30 ದಿನಗಳಿಗೆ duty leave ಮಂಜೂರು ಮಾಡಲು ಅವಕಾಶವಿದ್ದು, ಎಲ್ಲಾ ಖರ್ಚು ವೆಚ್ಚಗಳನ್ನು British Council of India ರವರು ಭರಿಸುವರೆಂದು ತಿಳಿಸಿರುವುದರಿಂದ, ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ಹೊರೆ ಇರುವುದಿಲ್ಲ. ಡಾ. ತಾಂಡವಗೌಡ ಟಿ.ಎನ್, ಸಹಾಯಕ ಪ್ರಾಧ್ಯಾಪಕರಿಗೆ ದಿನಾಂಕ: 27.05.2023ರಿಂದ 10.06.2023ರವರೆಗೆ ಲಂಡನ್‌ನಲ್ಲಿ ನಡೆಯುವ Furthering Higher Education Partnership-UK ನಲ್ಲಿ ವಿಶ್ವವಿದ್ಯಾನಿಲಯದಿಂದ ಯಾವುದೇ ಹಣಕಾಸಿನ ಭಾಧ್ಯತೆ ಇಲ್ಲದೆ ಭಾಗವಹಿಸಲು ಪ್ರಯಾಣದ ದಿನಗಳನ್ನು ಸೇರಿ OOD ಮೇಲೆ ತೆರಳಲು ಉಲ್ಲೇಖ (3)ರಲ್ಲಿ ಅನುಮತಿ ನೀಡಲಾಗಿದೆ. ಸದರಿ ವಿಷಯವನ್ನು ಸಿಂಡಿಕೇಟ್ ಸಭೆಯ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ.

ಸಿಂಡಿಕೇಟ್ ತೀರ್ಮಾನ:

**ಡಾ. ತಾಂಡವಗೌಡ ಟಿ.ಎನ್, ಸಹಾಯಕ ಪ್ರಾಧ್ಯಾಪಕರು, ಆಂಗ್ಲ ವಿಭಾಗ ಇವರನ್ನು ಯು.ಕೆ. ದೇಶದ ಲಂಡನ್‌ನಲ್ಲಿ ನಡೆದಿರುವ Furthering Higher Education Partnership-UK-ಕರ್ನಾಟಕ Leadership**

**Development Programme** ನಲ್ಲಿ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಪ್ರತಿನಿಧಿಯಾಗಿ ದಿನಾಂಕ **27.05.2023** ರಿಂದ **10.06.2023** ವರೆಗೆ (ಪ್ರಯಾಣ ದಿನಗಳು ಸೇರಿ) ವಿಶ್ವವಿದ್ಯಾನಿಲಯಕ್ಕೆ ಯಾವುದೇ ಹಣಕಾಸಿನ ಬಾಧ್ಯತೆ ಇಲ್ಲದೆ ಘಟನೋತ್ತರ ಅನುಮೋದನೆ ನೀಡಲು ಸಿಂಡಿಕೇಟ್ ಸಭೆ ತೀರ್ಮಾನಿಸಿತು.

ವಿಷಯ ಸಂಖ್ಯೆ–4:

ವಿಷಯ: ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ ಪ್ರಭಾರ ಮುಖ್ಯಸ್ಥರನ್ನು ನೇಮಕಾತಿ ಮಾಡುವ ಬಗ್ಗೆ.

ಉಲ್ಲೇಖ: ವಿ.ವಿ. ಆದೇಶ ಸಂಖ್ಯೆ: ಬಿಸಿಯು/ಸಿಬ್ಬಂದಿ–1&2/140/2021–22 ದಿನಾಂಕ: 03.09.2021.

***ಪರಾಮರ್ಶಕ ಟಿಪ್ಪಣಿ:***

ವಿಶ್ವವಿದ್ಯಾನಿಲಯದ ಪ್ರಾಣಿಶಾಸ್ತ್ರ, ಸಸ್ಯಶಾಸ್ತ್ರ, ಫ್ಯಾಷನ್ ಮತ್ತು ಅಪರೆಲ್ ಡಿಸೈನ್ಸ್, ಭೌತಶಾಸ್ತ್ರ, ಗಣಕವಿಜ್ಞಾನ, ಪರಿಸರ ವಿಜ್ಞಾನ, ಅರ್ಥಶಾಸ್ತ್ರ, ಆಂಗ್ಲ, ಕನ್ನಡ, ಇತಿಹಾಸ, ಸಮಾಜಶಾಸ್ತ್ರ ಸ್ನಾತಕೋತ್ತರ ಅಧ್ಯಯನ ವಿಭಾಗಕ್ಕೆ ಉಲ್ಲೇಖ (1)ರ ಆದೇಶದ ಪ್ರಕಾರ ದಿನಾಂಕ: 03.09.2021ರಿಂದ ವಿಭಾಗದ ಅಧ್ಯಕ್ಷರಾಗಿ ನೇಮಕ ಮಾಡಲಾಗಿತ್ತು. ಈ ಅಧ್ಯಕ್ಷರ ಸೇವಾವಧಿ ದಿನಾಂಕ: 04.09.2023ಕ್ಕೆ ಕೊನೆಗೊಂಡಿರುತ್ತದೆ.

ಬೆಂಗಳೂರು ವಿಶ್ವವಿದ್ಯಾನಿಲಯದ ಅಧಿಸೂಚನೆ ದಿನಾಂಕ: 11.11.1991ರ ಪರಿನಿಯಮ "Statute Pertaining to Appointment of Chairman, Department of Studies/ Departmental Council by Rotation" ರ ಪ್ರಕಾರ ವಿಭಾಗಗಳಲ್ಲಿ ಪ್ರಾಧ್ಯಾಪಕರು ಯಾರು ಇಲ್ಲದೇ ಇದ್ದಲ್ಲಿ ಸಹ ಪ್ರಾಧ್ಯಾಪಕರನ್ನೇ ಆಯಾ ವಿಭಾಗದ ಮುಖ್ಯಸ್ಥರನ್ನಾಗಿ ನೇಮಕಾತಿ ಮಾಡಲು ಅವಕಾಶವಿರುವಂತೆ, ಶೈಕ್ಷಣಿಕ ಮತ್ತು ಆಡಳಿತಾತ್ಮಕ ಹಿತದೃಷ್ಟಿಯಿಂದ ಕೆಳಗೆ ನಮೂದಿಸಿರುವ ಪ್ರಾಧ್ಯಾಪಕರು/ಸಹ–ಪ್ರಾಧ್ಯಾಪಕರು/ಸಹಾಯಕ ಪ್ರಾಧ್ಯಾಪಕರುನ್ನು ಅವರ ಹೆಸರಿನ ಮುಂದೆ ನಮೂದಿಸಿರುವ ದಿನಾಂಕದಿಂದ 02 ವರ್ಷ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ವಿಭಾಗದ ಮುಖ್ಯಸ್ಥರನ್ನಾಗಿ ನೇಮಕಾತಿ ಮಾಡಲು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸಿದೆ.

| ಕ್ರಮ. ಸಂಖ್ಯೆ | ಹೆಸರು | ವಿಭಾಗ | ಅವಧಿ ಪ್ರಾರಂಭಗೊಳ್ಳುವ ದಿನಾಂಕ |
|---|---|---|---|
| 1. | ಡಾ. ಎಸ್ ಹರಿಪ್ರಸಾದ್, ಪ್ರಾಧ್ಯಾಪಕರು, | ಪ್ರಾಣಿಶಾಸ್ತ್ರ ವಿಭಾಗ | 04.09.2023 |
| 2. | ಡಾ. ವಿ.ಆರ್. ದೇವರಾಜ್, ಪ್ರಾಧ್ಯಾಪಕರು, | ಫ್ಯಾಷನ್ ಮತ್ತು ಅಪರೆಲ್ ಡಿಸೈನ್ಸ್ | 04.09.2023 |
| 3. | ಡಾ. ಮೇಧ ಇಟಗಿ ಹುಯಿಲ್ಗೋಳ್, ಸಹ ಪ್ರಾಧ್ಯಾಪಕರು, | ಭೌತಶಾಸ್ತ್ರ ವಿಭಾಗ | 04.09.2023 |
| 4. | ಡಾ. ರಮೇಶ್ ಬಿ ಕುದೇನಟ್ಟಿ, ಸಹ ಪ್ರಾಧ್ಯಾಪಕರು, | ಗಣಕವಿಜ್ಞಾನ ವಿಭಾಗ | 04.09.2023 |
| 5. | ಡಾ. ಪಿ.ಆರ್.ಚೇತನಾ, ಪ್ರಾಧ್ಯಾಪಕರು | ಪರಿಸರ ವಿಜ್ಞಾನ ಮತ್ತು ಹವಾಮಾನ ಬದಲಾವಣೆ ವಿಭಾಗ | 04.09.2023 |
| 6. | ಡಾ. ರಿತಿಕಾ ಸಿನ್ಹಾ, ಸಹ ಪ್ರಾಧ್ಯಾಪಕರು | ಅರ್ಥಶಾಸ್ತ್ರ ವಿಭಾಗ ಮತ್ತು ಸಮಾಜಕಾರ್ಯ ವಿಭಾಗ | 04.09.2023 |

| | | | |
|---|---|---|---|
| 7. | ಡಾ. ಟಿ.ಎನ್. ತಾಂಡವಗೌಡ,<br>ಸಹಾಯಕ ಪ್ರಾಧ್ಯಾಪಕರು | ಆಂಗ್ಲ ಮತ್ತು ಕನ್ನಡ<br>ವಿಭಾಗ | 04.09.2023 |
| 8. | ಡಾ.ಎನ್. ನರಸಿಂಹಮೂರ್ತಿ,<br>ಪಾಧ್ಯಾಪಕರು, | ಇತಿಹಾಸ ವಿಭಾಗ | 04.09.2023 |
| 9. | ಡಾ. ಕೆ.ಆರ್.ಜಲಜ,<br>ಸಹ ಪ್ರಾಧ್ಯಾಪಕರು | ರಾಜ್ಯಶಾಸ್ತ್ರ ವಿಭಾಗ | 04.09.2023 |
| 10. | ಡಾ. ಎಂ.ನಿರ್ಮಲಾ,<br>ಸಹ ಪ್ರಾಧ್ಯಾಪಕರು, | ಸಮಾಜಶಾಸ್ತ್ರ ವಿಭಾಗ | 04.09.2023 |
| 11. | ಡಾ. ಶಿವಶಂಕರ್,<br>ಪ್ರಾಧ್ಯಾಪಕರು, | ಸಸ್ಯಶಾಸ್ತ್ರ ವಿಭಾಗ | 04.09.2023 |

ಸಿಂಡಿಕೇಟ್ ತೀರ್ಮಾನ:

**ಪ್ರಸ್ತಾವನೆಯಲ್ಲಿ ದಾಖಲಿಸಿರುವ ಪ್ರಾಣಿವಿಜ್ಞಾನ ಮತ್ತು ಸಸ್ಯ ವಿಜ್ಞಾನಗಳನ್ನು ಪ್ರಾಣಿಶಾಸ್ತ್ರ ಮತ್ತು ಸಸ್ಯಶಾಸ್ತ್ರಗಳೆಂದು ತಿದ್ದುಪಡಿ ಮಾಡಲು ಸೂಚಿಸಿ ಡಾ. ವಿ.ಆರ್ ದೇವರಾಜ್ ರವರ ಹೆಸರಿನ ಮುಂದೆ ದಾಖಲಿಸಿದ "ಸಸ್ಯವಿಜ್ಞಾನ" ಹೊರತುಪಡಿಸಿ ಪ್ರಸ್ತಾವನೆಯಲ್ಲಿ ನಮೂದಿಸಿದಂತೆ ವಿವಿಧ ಸ್ನಾತಕೋತ್ತರ ವಿಭಾಗಗಳಿಗೆ ಮುಖ್ಯಸ್ಥರನ್ನು 2 ವರ್ಷಗಳ ಅವಧಿಗೆ ಅಥವಾ ಅವರ ನಿವೃತ್ತಿಯವರೆಗೆ ಅಥವಾ ಮುಂದಿನ ಆದೇಶದವರೆಗೆ ನೇಮಕ ಮಾಡಲು ಸಿಂಡಿಕೇಟ್ ಸಭೆ ತೀರ್ಮಾನಿಸಿತು.**

**ವಿಷಯ ಸಂಖ್ಯೆ–5:**

ವಿಷಯ: ಸಿಎಎಸ್ ಅಡಿಯಲ್ಲಿ ಪ್ರಾಧ್ಯಾಪಕ ಹುದ್ದೆಗೆ ಪದೋನ್ನತಿ ನೀಡುವ ಬಗ್ಗೆ.

ಉಲ್ಲೇಖ:
1. ಸರ್ಕಾರಿ ಆದೇಶ ಸಂಖ್ಯೆ: ಇಡಿ 346 ಯುಬಿವಿ 2018 ದಿನಾಂಕ: 13.02.2019.
2. ಬೆಂಗಳೂರು ವಿಶ್ವವಿದ್ಯಾಲಯ ಆದೇಶ ಸಂಖ್ಯೆ: ಇಎಸ್‌ಟಿ–1/ ಇ1/ ತ್ರಿಭಜನೆ/2016 ದಿನಾಂಕ: 14.02.2019.
3. ವಿಶ್ವವಿದ್ಯಾನಿಲಯದ ಪರಿನಿಯಮ ಸಂಖ್ಯೆ: ಬೆಂ.ನ.ವಿ/ ಕು.ಸ.ಆ/ ಬೋಧಕ/ಪರಿನಿಯಮ/2022–23/743 ದಿನಾಂಕ: 16.08.2022.

*ಪರಾಮರ್ಶಕ ಟಿಪ್ಪಣಿ:*

ಉಲ್ಲೇಖ(01)ರ ಸರ್ಕಾರಿ ಆದೇಶದ ಪ್ರಕಾರ ಬೆಂಗಳೂರು ನಗರ ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುವ ಅಭಿಮತವ್ಯಕ್ತ ಪಡಿಸಿದ ಬೋಧಕರನ್ನು ಉಲ್ಲೇಖ(02)ರ ಬೆಂಗಳೂರು ವಿಶ್ವವಿದ್ಯಾನಿಲಯ ಆದೇಶದ ಪ್ರಕಾರ ಬೆಂಗಳೂರು ನಗರ ವಿಶ್ವವಿದ್ಯಾನಿಲಯಕ್ಕೆ ವರ್ಗಾವಣೆ ಮಾಡಲಾಗಿದ್ದು, ಅವರು ತಮ್ಮ ಹೆಸರಿನ ಮುಂದೆ ನಮೂದಿಸಿರುವ ದಿನಾಂಕದಂದು ಸಿಎಎಸ್ ಅಡಿಯಲ್ಲಿ ಪ್ರಾಧ್ಯಾಪಕ ಹುದ್ದೆಗೆ ಪದೋನ್ನತಿ ಪಡೆಯಲು ಅರ್ಹರಿರುತ್ತಾರೆ.

| ಕ್ರ.ಸಂ | ಹೆಸರು/ಹುದ್ದೆ/ ವಿಭಾಗ | ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಸೇವೆಗೆ ಸೇರಿದ ದಿನಾಂಕ | ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಸಲ್ಲಿಸಿರುವ ಸೇವಾವಧಿ | ಬೆಂ.ನ.ವಿ.ವಿ ದಲ್ಲಿ ಕಾರ್ಯ ವರದಿ ಮಾಡಿಕೊಂಡ ದಿನಾಂಕ | ಬೆಂ.ನ.ವಿ.ವಿದಲ್ಲಿ ಸಲ್ಲಿಸಿರುವ ಸೇವಾವಧಿ | ಸಹ – ಪ್ರಾಧ್ಯಾಪಕರ ಪದೋನ್ನತಿ ಹೊಂದಿದ ದಿನಾಂಕ | ಪ್ರಾಧ್ಯಾಪಕರ ಹುದ್ದೆಗೆ ಪದೋನ್ನತಿಗೆ ಅರ್ಹರಾದ ದಿನಾಂಕ |
|---|---|---|---|---|---|---|---|
| | (1) | (2) | (3) | (4) | (5) | (6) | (7) |
| 1. | ಡಾ. ಜಲಜ, ಸಹ ಪ್ರಾಧ್ಯಾಪಕರು, ವಾಣಿಜ್ಯ ವಿಭಾಗ | 27.03.2003 | 16 ವರ್ಷ | 15.02.2019 | 2 ವರ್ಷ 01 ತಿಂಗಳ | 29.03.2017 | 29.03.2020 |
| 2. | ಡಾ. ಮೇಧ ಇಟಗಿ ಹುಯಿಲ್ಗೋಳ್ ಸಹ ಪ್ರಾಧ್ಯಾಪಕರು, ಗಣಿತಶಾಸ್ತ್ರ ವಿಭಾಗ | 10.03.2007 | 12 ವರ್ಷ | 15.02.2019 | 3 ವರ್ಷ 01 ತಿಂಗಳು | 10.03.2019 | 10.03.2022 |
| 3. | ಡಾ. ರಮೇಶ್ ಬಿ ಕುದೇನಟ್ಟಿ, ಸಹ ಪ್ರಾಧ್ಯಾಪಕರು, ಗಣಿತಶಾಸ್ತ್ರ ವಿಭಾಗ | 12.03.2007 | 12 ವರ್ಷ | 15.02.2019 | 3 ವರ್ಷ 01 ತಿಂಗಳು | 12.03.2019 | 12.03.2022 |
| 4. | ಡಾ.ಎಂ.ನಿರ್ಮಲಾ, ಸಹ ಪ್ರಾಧ್ಯಾಪಕರು, ಸಿ.ಬಿ.ಎಸ್.ಎಂ.ಎಸ್ | 23.03.2007 | 12 ವರ್ಷ | 15.02.2019 | 3 ವರ್ಷ 01 ತಿಂಗಳು | 23.03.2019 | 23.03.2022 |
| 5. | ಡಾ. ರಿತಿಕಾ ಸಿನ್ಹ, ಸಹ ಪ್ರಾಧ್ಯಾಪಕರು, ಸಿ.ಬಿ.ಎಸ್.ಎಂ.ಎಸ್ | 26.04.2007 | 12 ವರ್ಷ | 15.02.2019 | 3 ವರ್ಷ 02 ತಿಂಗಳು | 26.04.2019 | 26.04.2022 |

ಬೋಧಕ ಸಿಬ್ಬಂದಿಗಳ ನೇಮಕಾತಿ ಪ್ರಕ್ರಿಯೆಗೆ ಅವಶ್ಯಕವಿರುವ ಪರಿನಿಯಮಗಳನ್ನು ಯುಜಿಸಿ ನಿಯಮಾವಳಿ 2018 ಹಾಗೂ ಕರ್ನಾಟಕ ಉನ್ನತ ಶಿಕ್ಷಣ ಇಲಾಖೆ ನೀಡಿದ ಮಾದರಿ ಪರಿನಿಯಮದ ಪ್ರಕಾರ ಸಿದ್ಧಪಡಿಸಿದ ಕರಡು ಪರಿನಿಯಮಗಳನ್ನು ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳ ಮುಂದೆ ಮಂಡಿಸಿ ಅನುಮೋದನೆ ಪಡೆದು ಈಗಾಗಲೇ ಉಲ್ಲೇಖ (03)ರ ಪತ್ರ ಮುಖೇನ ಕುಲಾಧಿಪತಿಗಳ ಅನುಮೋದನೆಗಾಗಿ ಸರ್ಕಾರಕ್ಕೆ ಸಲ್ಲಿಸಲಾಗಿದ್ದು, ಸರ್ಕಾರದ ದಿನಾಂಕ: 08.12.2022 ಮತ್ತು 12.04.2023ರ ಪತ್ರಗಳಲ್ಲಿ ಸೂಚಿಸಿದ ತಿದ್ದುಪಡಿಗಳನ್ನು ಮಾಡಿ ಮರು ಸಲ್ಲಿಸಲಾಗಿದೆ. ಸರ್ಕಾರದಿಂದ ಇನ್ನೂ ಯಾವುದೇ ಮಾಹಿತಿ ಬಂದಿರುವುದಿಲ್ಲ.

ಮೇಲ್ಕಂಡ ಸಹ–ಪ್ರಾಧ್ಯಾಪಕರಲ್ಲಿ ಒಬ್ಬರಾದ ಡಾ.ಜಲಜ ರವರು ದಿನಾಂಕ: 29.03.2020ಕ್ಕೆ ಹಾಗೂ ಕ್ರಮ ಸಂಖ್ಯೆ 02 ರಿಂದ 05ರ ಸಹ ಪ್ರಾಧ್ಯಾಪಕರು ಮಾರ್ಚ್ / ಏಪ್ರಿಲ್ 2022ಕ್ಕೆ ಪ್ರಾಧ್ಯಾಪಕ ಹುದ್ದೆಗೆ ಮುಂಬಡ್ತಿ ಪಡೆಯಲು ಅರ್ಹತೆ ಹೊಂದಿದ್ದರೂ, ವಿಶ್ವವಿದ್ಯಾನಿಲಯದ ಪರಿನಿಯಮಗಳಿಗೆ ಇನ್ನೂ ಸರ್ಕಾರದ ಅನುಮೋದನೆ ದೊರೆಯದ ಕಾರಣ ಇವರಿಗೆ ಪದೋನ್ನತಿ ನೀಡಲು ಸಾಧ್ಯವಾಗಿರುವುದಿಲ್ಲ. ಪರಿನಿಯಮಗಳು ಸರ್ಕಾರದಿಂದ ಅನುಮೋದನೆಗೊಳ್ಳಲು ಇನ್ನೂ ಕಾಲವಕಾಶ ಹಿಡಿಯುತ್ತದೆ. ಆದುದರಿಂದ, ಮಾತೃ ವಿಶ್ವವಿದ್ಯಾಲಯವಾದ ಬೆಂಗಳೂರು ವಿಶ್ವವಿದ್ಯಾಲಯದ ಸಿಎಎಸ್ ಅಡಿಯಲ್ಲಿ ಮುಂಬಡ್ತಿ ನೀಡಲು ಅವಕಾಶ ಕಲ್ಪಿಸುವ ಪರಿನಿಯಮಗಳು ಕುಲಾಧಿಪತಿಗಳಿಂದ ಅಂಗೀಕೃತಗೊಂಡು, ದಿನಾಂಕ: 30.05.2022ರ ಅಧಿಸೂಚನೆಯ ಮೂಲಕ ಪ್ರಕಟಿಸಿರುತ್ತಾರೆ. ಅವುಗಳನ್ನು ಬೆಂಗಳೂರು ನಗರ ವಿಶ್ವವಿದ್ಯಾನಿಲಯದಲ್ಲಿ ಅಳವಡಿಸಿಕೊಳ್ಳಲು ದಿನಾಂಕ: 18.06.2022ರ ಸಿಂಡಿಕೇಟ್ ಸಭೆ ಅನುಮೋದನೆ ನೀಡಿರುತ್ತದೆ. ಅದರಂತೆ ಸಿಎಎಸ್ ಅಡಿಯಲ್ಲಿ ಮುಂಬಡ್ತಿ ಪಡೆಯಲು ಅರ್ಹರಾದ ಬೋಧಕರಿಗೆ ಮುಂಬಡ್ತಿ ನೀಡಲು ನೇಮಕಾತಿ ಮಂಡಳಿ ರಚಿಸಿ ಪ್ರಕ್ರಿಯೆ ಪ್ರಾರಂಭಿಸಲು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ವಿವರಣೆ:

ಕುಲಪತಿಗಳು ಸರ್ಕಾರಕ್ಕೆ ಸಲ್ಲಿಸಿದ ಪರಿನಿಯಮ ಕುರಿತು ವಿವರಿಸಿದರು. ಬೆಂಗಳೂರು ವಿಶ್ವವಿದ್ಯಾಲಯದ ಸಿಎಎಸ್ ಅಡಿಯಲ್ಲಿ ಮುಂಬಡ್ತಿ ನೀಡುವ ಪರಿನಿಯಮವನ್ನು ನಮ್ಮ ವಿಶ್ವವಿದ್ಯಾನಿಲಯ ಸ್ಥಾಪನೆಯಾದ ನಂತರ ಜಾರಿಯಲ್ಲಿ ತಂದಿರುವುದರಿಂದ ಅದನ್ನು ಅಳವಡಿಸಿಕೊಳ್ಳಲು ದಿನಾಂಕ 18.06.2022 ರ ಸಿಂಡಿಕೇಟ್ ಸಭೆಯಲ್ಲಿ ತೀರ್ಮಾನಿಸಲಾಗಿದೆ. ಆ ನಂತರ ವಿಶ್ವವಿದ್ಯಾನಿಲಯ ಸರ್ಕಾರದ ಅನುಮೋದನೆಗಾಗಿ ಸಲ್ಲಿಸಿದ ಪರಿನಿಯಮಗಳಿಗೆ ಕಾಲಕಾಲಕ್ಕೆ ಸೂಚಿಸಲಾದ ತಿದ್ದುಪಡಿಗಳನ್ನು ಮಾಡಿ ಸರ್ಕಾರಕ್ಕೆ ಸಲ್ಲಿಸಲಾಗಿದೆ.

ನಮ್ಮ ವಿಶ್ವವಿದ್ಯಾಲಯದ ಸಹಾಯಕ ಮತ್ತು ಸಹ ಪ್ರಾಧ್ಯಾಪಕರು ಸಿಎಎಸ್ ಅಡಿಯಲ್ಲಿ ಅರ್ಹರಾದವರಿಗೆ ಬಡ್ತಿ ನೀಡಲು ಕ್ರಮವಹಿಸಲು ಸಿದ್ಧರಾಗಿದ್ದು, ಈ ಸಂಬಂಧ ಪರಿನಿಯಮಕ್ಕೆ ಅನುಮೋದನೆ ನೀಡುವಲ್ಲಿ ಆಗುತ್ತಿರುವ ವಿಳಂಬದಿಂದಾಗಿ ಬಡ್ತಿಗಳಿಂದ ವಂಚಿತರಾಗುತ್ತಿದ್ದಾರೆ. ಈಗಾಗಲೇ ಸರ್ಕಾರಕ್ಕೆ ಅಂತಿಮವಾಗಿ ಸಲ್ಲಿಸಿರುವ ಪರಿನಿಯಮಾವಳಿಗಳು ಶೀಘ್ರದಲ್ಲಿ ಒಪ್ಪಿತವಾಗಿ ಸರ್ಕಾರದಿಂದ ಬರದಿದಲ್ಲಿ, ಬೆಂಗಳೂರು ವಿಶ್ವವಿದ್ಯಾಲಯದ ಸಿ.ಎ.ಎಸ್ ಪರಿನಿಯಮಗಳನ್ನು ಸಿಂಡಿಕೇಟ್ ಸಭೆ ಈಗಾಗಲೇ ಅಳವಡಿಸಿಕೊಳ್ಳಲು ತೀರ್ಮಾನಿಸಿರುವುದರಿಂದ, ಸದರಿ ಪರಿನಿಯಮಗಳ ಪ್ರಕಾರ ನೇಮಕಾತಿ ಮಂಡಳಿಗಳನ್ನು ರಚಿಸಿ ಬಡ್ತಿ ನೀಡಲು ಕ್ರಮವಹಿಸಲು ಸಿಂಡಿಕೇಟ್ ಸಭೆ ಪರಿಗಣಿಸಬೇಕೆಂದು ಸದಸ್ಯರು ಅಭಿಪ್ರಾಯ ವ್ಯಕ್ತಪಡಿಸಿದರು.

ಸಿಂಡಿಕೇಟ್ ತೀರ್ಮಾನ:

**ಅಂತಿಮ ತಿದ್ದುಪಡಿಯೊಂದಿಗೆ ಸರ್ಕಾರಕ್ಕೆ ಸಲ್ಲಿಸಿರುವ ಪರಿನಿಯಮಾವಳಿಗಳು ಶೀಘ್ರದಲ್ಲಿ ಅನುಮೋದನೆಗೊಂಡು ಬಾರದಿದ್ದಲ್ಲಿ, ಬೆಂಗಳೂರು ವಿಶ್ವವಿದ್ಯಾಲಯದ ಸಿ.ಎ.ಎಸ್ ಪರಿನಿಯಮಗಳನ್ನು ಅಳವಡಿಸಿಕೊಂಡು ಸದರಿ ಪರಿನಿಯಮಗಳ ಪ್ರಕಾರ ನೇಮಕಾತಿ ಮಂಡಳಿಗಳನ್ನು ರಚಿಸಿ, ಸಿ.ಎ.ಎಸ್ ಅಡಿಯಲ್ಲಿ ಅರ್ಹರಿರುವ ಸಹಾಯಕ ಮತ್ತು ಸಹ ಪ್ರಾಧ್ಯಾಪಕರುಗಳು ಮುಂಬಡ್ತಿ ನೀಡುವ ಪ್ರಕ್ರಿಯೆ ಪ್ರಾರಂಭಿಸಲು ಅನುಮೋದನೆ ನೀಡಲು ಸಿಂಡಿಕೇಟ್ ಸಭೆ ತೀರ್ಮಾನಿಸಿತು.**

**ವಿಷಯ ಸಂಖ್ಯೆ: 6**

| | |
|---|---|
| ವಿಷಯ | ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕೋತ್ತರ ವಿಭಾಗಗಳಿಗೆ ಅತಿಥಿ ಉಪನ್ಯಾಸಕರನ್ನು ಮಾಹೆಯಾನ ಗೌರವ ಧನದ ಆಧಾರದ ಮೇಲೆ ನೇಮಕ ಮಾಡುವ ಕುರಿತು. |
| ಉಲ್ಲೇಖ | 1. ಯುಜಿಸಿ ನಿಯಮಾವಳಿ 2018 ರ ಅಧಿಸೂಚನೆ ದಿನಾಂಕ: 18.07.2023.<br>2. ಕಾಲೇಜು ಶಿಕ್ಷಣ ಇಲಾಖೆ ರವರ ಪತ್ರ ಸಂಖ್ಯೆ: ಕಾಶಿಇ/ನೇವಿ-1/ ಅಉಅ/ 97/ 2021-22, ದಿನಾಂಕ: 28.01.2022 |

*ಪರಾಮರ್ಶಕ ಟಿಪ್ಪಣಿ:*

ಬೆಂಗಳೂರು ನಗರ ವಿಶ್ವವಿದ್ಯಾನಿಲಯದಲ್ಲಿ ಒಟ್ಟು 23 ಸ್ನಾತಕೋತ್ತರ ಅಧ್ಯಯನ ವಿಭಾಗಗಳಿದ್ದು, ಈ ವಿಭಾಗಗಳ ಬೋಧನೆಗಾಗಿ 161 ಬೋಧಕ ಹುದ್ದೆಗಳನ್ನು ಸರ್ಕಾರ ಮಂಜೂರು ಮಾಡಿರುತ್ತದೆ. ಈ ಹುದ್ದೆಗಳ

ಪೈಕಿ ಪ್ರಸ್ತುತ 14 ಖಾಯಂ ಬೋಧಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಉಳಿದ ಬೋಧನಾ ಕಾರ್ಯವನ್ನು ಅತಿಥಿ ಉಪನ್ಯಾಸಕರು ನಿರ್ವಹಿಸುತ್ತಿದ್ದಾರೆ.

ಬೆಂಗಳೂರು ನಗರ ವಿಶ್ವವಿದ್ಯಾನಿಲಯ ಪ್ರಾರಂಭವಾಗಿ 2022-23ಕ್ಕೆ 5 ವರ್ಷ ಪೂರ್ಣಗೊಳ್ಳುತ್ತದೆ. ನ್ಯಾಕ್ ಮಾರ್ಗಸೂಚಿ ಪ್ರಕಾರ ವಿಶ್ವವಿದ್ಯಾನಿಲಯ ನ್ಯಾಕ್ ಸಂಸ್ಥೆಯಿಂದ ಮಾನ್ಯತೆ ಪಡೆಯುವ ಅನಿವಾರ್ಯತೆ ಉಂಟಾಗಿದೆ. ಈಗಾಗಲೇ ವಿಶ್ವವಿದ್ಯಾನಿಲಯ ನ್ಯಾಕ್ ಸಂಸ್ಥೆಗೆ ಸಂಪರ್ಕಿಸಿ ಬೋಧಕ/ಬೋಧಕೇತರರಿಗೆ ನ್ಯಾಕ್ ಮಾನ್ಯತೆಯ ವಿಧಿವಿಧಾನಗಳನ್ನು ಕುರಿತುಕಾರ್ಯಗಾರ ಜರುಗಿಸಿ ನ್ಯಾಕ್ ಅಧಿಕಾರಿಗಳಿಂದ ಮಾರ್ಗದರ್ಶನ ನೀಡಲಾಗಿದೆ. ನ್ಯಾಕ್ ಮಾನ್ಯತೆ ನೀಡುವ ಮಾನದಂಡಗಳ ಪ್ರಕಾರ ವಿಶ್ವವಿದ್ಯಾನಿಲಯ ಭೌತಿಕ ಸೌಲಭ್ಯಗಳಾದ ಕಟ್ಟಡಗಳ ನವೀಕರಣ, ಹೊಸ ಶೈಕ್ಷಣಿಕ ಭವನದ ನಿರ್ಮಾಣ ಅತ್ಯಾಧುನಿಕ ಕ್ರೀಡಾ ಸಂಕೀರಣ, ಆರೋಗ್ಯ ಕೇಂದ್ರ, ಉಪಾಹಾರ ಗೃಹ ಮುಂತಾದವುಗಳನ್ನು ಒದಗಿಸಲಾಗಿದೆ. ಶಿಕ್ಷಕರು ತಮ್ಮ ಸಂಶೋಧನ ಕೆಲಸಗಳಲ್ಲಿ ಪ್ರವೃತ್ತರಾಗಿರುತ್ತಾರೆ. 32 ಸಂಶೋಧನ ಕೇಂದ್ರಗಳಿಗೆ ಮಾನ್ಯತೆ ನೀಡಲಾಗಿದೆ, ಹಳೆ ವಿದ್ಯಾರ್ಥಿಗಳ ಸಂಘದ ಸ್ಥಾಪನೆಗೆ ಕ್ರಮವಹಿಸಲಾಗಿದೆ. ಹೀಗಾಗಿ ಖಾಯಂ ಬೋಧಕ/ಬೋಧಕೇತರ ಸಿಬ್ಬಂದಿಗಳ ನೇಮಕಾತಿ ಹೊರತುಪಡಿಸಿದರೆ ಉಳಿದ ಮಾನದಂಡಗಳಲ್ಲಿ ಸಾಧನೆ ತೃಪ್ತಿಕರವಾಗಿರುತ್ತದೆ.

ಖಾಯಂ ಬೋಧಕ ಸಿಬ್ಬಂದಿಗಳನ್ನು ಹೊಂದುವುದು ನ್ಯಾಕ್ ಮಾನದಂಡಗಳಲ್ಲಿ ಬಹು ಮುಖ್ಯವಾದ ಅಂಶವಾಗಿದ್ದು ನಾವು ಅನುಸರಿಸುತ್ತಿರುವ ಅತಿಥಿ ಉಪನ್ಯಾಸಕ ವ್ಯವಸ್ಥೆಯಿಂದ ಹಿನ್ನೆಡೆಯಾಗುವ ಸಾಧ್ಯತೆಯಿದೆ.

ವಿಶ್ವವಿದ್ಯಾನಿಲಯ ಧನ ಸಹಾಯ ಆಯೋಗದವರು ಹೊರಡಿಸಿರುವ 2018ರ ಅಧಿನಿಯಮಗಳಲ್ಲಿ ಗುತ್ತಿಗೆಆಧಾರದ ಬೋಧಕರನ್ನು ನೇಮಕ ಮಾಡಿಕೊಳ್ಳಲು ಅವಕಾಶ ಕಲ್ಪಿಸಿರುತ್ತಾರೆ. ಇದಲ್ಲದೆ ಕಾಲೇಜು ಶಿಕ್ಷಣ ಇಲಾಖೆ ಹೊರಡಿಸಿರುವ ಉಲ್ಲೇಖ (2) ರಆದೇಶದಲ್ಲಿ ಶೈಕ್ಷಣಿಕ ವರ್ಷಕ್ಕೆ 10 ತಿಂಗಳ ಅವಧಿಗೆ ಗೌರವಧನದ ಮೇಲೆ ನೇಮಕ ಮಾಡಿಕೊಳ್ಳಲು ಅವಕಾಶ ನೀಡಿರುತ್ತಾರೆ. ನ್ಯಾಕ್ ಮತ್ತು ಯುಜಿಸಿ 12(ಬಿ) ಮಾನ್ಯತೆಗೆ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಂಡ ಪೂರ್ಣಾವಧಿ ಉಪನ್ಯಾಸಕರನ್ನು ಪರಿಗಣನೆಗೆ ತೆಗೆದುಕೊಳ್ಳುತ್ತಾರೆಂದು ತಿಳಿದುಬಂದಿದೆ. ಪೂರ್ಣಾವಧಿ ಅತಿಥಿ ಉಪನ್ಯಾಸಕರನ್ನು 10 ತಿಂಗಳ ಅವಧಿಗೆ ಮಾಹೆಯಾನ ಗೌರವಧನದ ಆಧಾರದ ಮೇಲೆ ನೇಮಕ ಮಾಡಿಕೊಂಡು ಅವುಗಳ ಆಧಾರದ ಮೇಲೆ ಈ ಅತಿಥಿ ಉಪನ್ಯಾಸಕರ ವಿವರಗಳೊಂದಿಗೆ ನ್ಯಾಕ್ ಮತ್ತು ಯುಜಿಸಿಗಳಿಗೆ ಪ್ರಸ್ತಾವನೆ ಸಲ್ಲಿಸಲು ಅನುಕೂಲವಾಗುತ್ತದೆ.

ಈ ರೀತಿ ನೇಮಕಮಾಡಿಕೊಳ್ಳುವ ಅತಿಥಿ ಉಪನ್ಯಾಸಕರಿಗೆ ಕಾಲೇಜು ಶಿಕ್ಷಣ ಇಲಾಖೆ, ಕೇಂದ್ರಿಯ ವಿಶ್ವವಿದ್ಯಾನಿಲಯ ಮತ್ತು ಬೆಂಗಳೂರು ನಗರ ವಿಶ್ವವಿದ್ಯಾನಿಲಯದಲ್ಲಿ ನೀಡುತ್ತಿರುವ ಗೌರವಧನದ ತುಲನಾತ್ಮಕ ಪಟ್ಟಿಯವಿವರ ಕೆಳಗಿನಂತಿದೆ.

| ಕಾಲೇಜು ಶಿಕ್ಷಣ ಇಲಾಖೆದಲ್ಲಿ ನೀಡುತ್ತಿರುವ ಸಂಭಾವನೆ | ಕೇಂದ್ರಿಯ ವಿಶ್ವವಿದ್ಯಾನಿಲಯ, ಕರ್ನಾಟಕದಲ್ಲಿ ನೀಡುತ್ತಿರುವ ಸಂಭಾವನೆ | ಪ್ರಸ್ತುತ ಬೆಂಗಳೂರು ನಗರ ವಿಶ್ವವಿದ್ಯಾನಿಲಯದಲ್ಲಿ ನೀಡುತ್ತಿರುವ ಸಂಭಾವನೆ |
|---|---|---|
| 1. 5 ವರ್ಷ ಮತ್ತು ಅದಕ್ಕಿಂತ ಹೆಚ್ಚಿನ ಅವಧಿಗೆ ಅತಿಥಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದ ಮತ್ತು ಯುಜಿಸಿ ನಿಗಧಿಪಡಿಸಿದ ವಿದ್ಯಾರ್ಹತೆ ಹೊಂದಿರುವವರಿಗೆ ರೂ. 32,000/- (ಮೂವತ್ತೆರಡು ಸಾವಿರ ಮಾತ್ರ).<br>2. 5 ವರ್ಷಕ್ಕಿಂತ ಕಡಿಮೆ ಅವಧಿಗೆ ಅತಿಥಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದ | 1. Rs. 40,000/- for candidate possessing UGC/CSIR-NET.<br>2. Rs. 45,000/- for candidate possessing UGC/CSIR-NET along with Ph.D.<br>3. For Hourly basis faculty, the remuneration maximum ceiling per month per faculty | 1. NET/SLET/Ph.D ಹೊಂದಿರುವ ಪೂರ್ಣಾವಧಿ ಅತಿಥಿ ಉಪನ್ಯಾಸಕರಿಗೆ ವಾರಕ್ಕೆ 16 ಗಂಟೆಗಳ ಲೆಕ್ಕದಲ್ಲಿ ತಿಂಗಳಿಗೆ 64 ಗಂಟೆಗಳ ಕಾರ್ಯಭಾರವೆಂದು ನಿಗಧಿಪಡಿಸಿ ಪ್ರತಿಗಂಟೆಗೆ ರೂ.780/- (ರೂ. ಏಳುನೂರ ಎಂಭತ್ತು) ರಂತೆ ಗರಿಷ್ಠ ರೂ 49,920/- (ರೂ. ನಲವತ್ತೊಂಭತ್ತು ಸಾವಿರದ |

| | | |
|---|---|---|
| ಮತ್ತು ಯುಜಿಸಿ ನಿಗಧಿಪಡಿಸಿದ ವಿದ್ಯಾರ್ಹತೆ ಹೊಂದಿಲ್ಲದವರಿಗೆ ರೂ. 30,000/- (ಮೂವತ್ತು ಸಾವಿರ ಮಾತ್ರ).<br>3. 5 ವರ್ಷ ಮತ್ತು ಅದಕ್ಕಿಂತ ಹೆಚ್ಚಿನ ಅವಧಿಗೆ ಅತಿಥಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದ ಮತ್ತು ಯುಜಿಸಿ ನಿಗಧಿಪಡಿಸಿದ ವಿದ್ಯಾರ್ಹತೆ ಹೊಂದಿಲ್ಲದವರಿಗೆ ರೂ. 28,000/- (ಇಪ್ಪತ್ತೆಂಟು ಸಾವಿರ ಮಾತ್ರ).<br>4. ವರ್ಷಕ್ಕಿಂತ ಕಡಿಮೆ ಅವಧಿಗೆ ಅತಿಥಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದ ಮತ್ತು ಯುಜಿಸಿ ನಿಗಧಿಪಡಿಸಿದ ವಿದ್ಯಾರ್ಹತೆ ಹೊಂದಿಲ್ಲದವರಿಗೆ ರೂ.26,000/- (ಇಪ್ಪತ್ತಾರು ಸಾವಿರ ಮಾತ್ರ). | is Rs. 25,000/- | ಒಂಭೈನೂರು ಇಪ್ಪತ್ತು)<br>2. NET/SLET/Ph.D ಇಲ್ಲದಿರುವ ಪೂರ್ಣಾವಧಿ ಅತಿಥಿ ಉಪನ್ಯಾಸಕರಿಗೆ ವಾರಕ್ಕೆ 16 ಗಂಟೆಗಳ ಲೆಕ್ಕದಲ್ಲಿ ತಿಂಗಳಿಗೆ 64 ಗಂಟೆಗಳ ಕಾರ್ಯಭಾರವೆಂದು ನಿಗಧಿಪಡಿಸಿ ಪ್ರತಿಗಂಟೆಗೆರೂ.680/- (ರೂ. ಆರು ನೂರಎಂಭತ್ತು) ರಂತೆಗರಿಷ್ಠ ರೂ 43,520/- (ರೂ. ನಲವತ್ತು ಮೂರು ಸಾವಿರದಐದು ನೂರಇಪ್ಪತ್ತು)<br>3. 10 ಗಂಟೆಗಿಂತ ಕಡಿಮೆ ಬೋಧನಾ ಅವಧಿ ಇರುವ ಅತಿಥಿ ಉಪನ್ಯಾಸಕರನ್ನು ಅರೆಕಾಲಿಕ ಅತಿಥಿ ಉಪನ್ಯಾಸಕರೆಂದು ಪರಿಗಣಿಸಿ, ಮೇಲಿನ ದರಗಳ ಪ್ರಕಾರ ಬೋಧನಾ ಮಾಡಿದ ಅವಧಿಗೆ ಸಂಭಾವನೆ ನೀಡಲಾಗುವುದು. |

ಪೂರ್ಣಾವಧಿಗೆ ಮಾಹೆಯಾನ ಗೌರವಧನದ ಆಧಾರದ ಮೇಲೆ ಅತಿಥಿಉಪನ್ಯಾಸಕರನ್ನು 10 ತಿಂಗಳ ಅವಧಿಗೆ 2023-24ನೇ ಶೈಕ್ಷಣಿಕ ವರ್ಷಕ್ಕೆ ನೇಮಕ ಮಾಡಿಕೊಳ್ಳಲು, ಅವರಿಗೆ ಗೌರವಧನ ನಿಗದಿಪಡಿಸಲು ಮತ್ತು ಅರೆಕಾಲಿಕ ಉಪನ್ಯಾಸಕರಿಗೆ ಈಗಿರುವ ವ್ಯವಸ್ಥೆಯಂತೆ ಕಾರ್ಯಭಾರದ ಆಧಾರದ ಮೇಲೆ ಪ್ರಸ್ತುತ ಪ್ರತಿ ಗಂಟೆಗೆ ನೀಡುತ್ತಿರುವ ಗೌರವಧನವನ್ನು ಮುಂದುವರೆಸಿಕೊಂಡು ಹೋಗುವ ಬಗ್ಗೆ ಸಿಂಡಿಕೇಟ್ ಸಭೆಯ ಪರಿಗಣನೆಗೆ ಮತ್ತು ತೀರ್ಮಾನಕ್ಕಾಗಿ ಮಂಡಿಸಿದೆ.

<u>ಸಿಂಡಿಕೇಟ್ ತೀರ್ಮಾನ:</u>

**ಪ್ರಸ್ತಾವನೆಯನ್ನು ಪರಿಗಣಿಸಿ, ಕಾಲೇಜು ಶಿಕ್ಷಣ ಇಲಾಖೆಯವರು ಅಳವಡಿಸಿಕೊಂಡಿರುವ ಕ್ರಮದಂತೆ ಮಾಹೆಯಾನ ಸಂಭಾವನೆ ಆಧಾರದ ಮೇಲೆ ಖಾಯಂ ಅಧ್ಯಾಪಕರು ಇಲ್ಲದ ಅಥವಾ ಕಡಿಮೆ ಇರುವ ವಿಭಾಗಗಳಿಗೆ ಪ್ರತಿ ವಿಭಾಗಕ್ಕೆ ಅವಶ್ಯಕತೆಗೆ ಅನುಗುಣವಾಗಿ ಇಬ್ಬರು ಪೂರ್ಣಾವಧಿ ಅತಿಥಿ ಉಪನ್ಯಾಸಕರನ್ನು 10 ತಿಂಗಳುಗಳ ಅವಧಿಗೆ ಕೆಳಕಂಡ ಮಾಹೆಯಾನ ದರಗಳ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು, ಉಳಿದಂತೆ ಪ್ರತಿ ಗಂಟೆಯ ಆಧಾರದ ಮೇಲೆ ಸಂಭಾವನೆ ನೀಡಲು ಸಿಂಡಿಕೇಟ್ ಸಭೆ ತೀರ್ಮಾನಿಸಿತು.**

| ಅತಿಥಿ ಉಪನ್ಯಾಸಕರು ಪ್ರಕಾರಗಳು | ಮಾಹೆಯಾನ ದರ |
|---|---|
| ಅ) **NET / SLET/ Ph.D** ಹೊಂದಿರುವ ಪೂರ್ಣಾವಧಿ ಅತಿಥಿ ಉಪನ್ಯಾಸಕರಿಗೆ (ವಾರಕ್ಕೆ **16** ಗರಿಷ್ಠ **64** ಗಂಟೆಗಳ) | ರೂ. **49,920/-** ಪ್ರತಿ ಗಂಟೆಗೆ **780/-** |
| ಆ) **NET / SLET/ Ph.D** ಇಲ್ಲದಿರುವ (ವಾರಕ್ಕೆ **16** ಗರಿಷ್ಠ **64** ಗಂಟೆಗಳ) | ರೂ. **43,520/-** ಪ್ರತಿ ಗಂಟೆಗೆ **680/-** |
| ಇ)ಉಳಿದ ಅರೆಕಾಲಿಕೆ ಅತಿಥಿ ಉಪನ್ಯಾಸಕರು:<br>**i) NET / SLET/ Ph.D** ಹೊಂದಿರುವ<br>**ii) NET / SLET/ Ph.D** ಇಲ್ಲದಿರುವವರಿಗೆ | <br>ಪ್ರತಿ ಗಂಟೆಗೆ ರೂ. **780/-**<br>ಪ್ರತಿ ಗಂಟೆಗೆ ರೂ. **680/-** |
| ಈ) ವೃತ್ತಿಪರ ವಿದ್ವಾಂಸರು / ಉದ್ಯಾಮಗಳ ಪರಿಣಿತರು / ಶಿಕ್ಷಣ ತಜ್ಞರು ನೀಡುವ ಆಹ್ವಾನಿತ ಉಪನ್ಯಾಸಗಳಿಗೆ | ಪ್ರತಿ ಗಂಟೆಗೆ ರೂ. **2000/-** ಗರಿಷ್ಠ ವಾರಕ್ಕೆ **5** ಗಂಟೆಗಳು |

ವಿಷಯ ಸಂಖ್ಯೆ: 7

ವಿಷಯ: ಉನ್ನತ ಶಿಕ್ಷಣ ಇಲಾಖೆಯ ಸಿಬ್ಬಂದಿಗಳಿಗೆ ಮಧ್ಯಂತರ ಪರಿಹಾರವನ್ನು ಹೆಚ್.ಆರ್.ಎಮ್.ಎಸ್ ಮೂಲಕ ಪಾವತಿಸುವ ಕುರಿತು.

ಉಲ್ಲೇಖ: 1. ಸರ್ಕಾರದ ಆದೇಶ ಸಂಖ್ಯೆ:ಆಇ 07 ಎಸ್ಆರ್‌ಪಿ 2023 ಬೆಂಗಳೂರು ದಿನಾಂಕ:01.03.2023

2. ಸರ್ಕಾರದ ಪತ್ರ ಸಂಖ್ಯೆ:ಇಡಿ 54 ಹೆಚ್‌ಪಿಯು 2023 ಬೆಂಗಳೂರು ದಿನಾಂಕ:30.06.2023

***ಪರಾಮರ್ಶಕ ಟಿಪ್ಪಣಿ:***

ಉಲ್ಲೇಖ 1ರ ಸರ್ಕಾರದ ಆದೇಶದಲ್ಲಿ 2018ರ ಪರಿಷ್ಕೃತ ವೇತನ ಶ್ರೇಣಿಯಲ್ಲಿ ವೇತನ ಪಡೆಯುತ್ತಿರುವ ವಿಶ್ವವಿದ್ಯಾನಿಲಯದ ನೌಕರರಿಗೆ 01.04.2023 ರಿಂದ ಜಾರಿಗೆ ಬರುವಂತೆ ಮೂಲವೇತನದ ಶೇ.17% ರಷ್ಟು ಮಧ್ಯಂತರ ಪರಿಹಾರವನ್ನು ಮಂಜೂರು ಮಾಡಿ ಆದೇಶಿಸಿರುತ್ತದೆ.

ಸದರಿ ಆದೇಶದ ಕ್ರಮ ಸಂಖ್ಯೆ:6ರಲ್ಲಿ ನೌಕರರಿಗೆ ವಿಶ್ವವಿದ್ಯಾನಿಲಯ ಒಳಗೊಂಡಂತೆ ಸ್ಥಳೀಯ ಸಂಸ್ಥೆಗಳ ಪೂರ್ಣಾವಧಿ ನೌಕರರಿಗೆ ಈ ಆದೇಶವನ್ನು ಅನ್ವಯಿಸಲಾಗಿದ್ದು, ಆದರೆ ಇದರಿಂದ ಉಂಟಾಗುವ ವೆಚ್ಚವನ್ನು ಅಯಾಯ ಸಂಸ್ಥೆಗಳು ಭರಿಸಬೇಕೆಂದು ಸೂಚಿಸಲಾಗಿದೆ.

ಉಲ್ಲೇಖ 2ರ ಸರ್ಕಾರದ ಆದೇಶದಲ್ಲಿ ವಿಶ್ವವಿದ್ಯಾನಿಲಯದ ಸಿಬ್ಬಂದಿಗಳಿಗೆ ವಿಸ್ತರಿಸಲಾಗಿರುವ ಮಧ್ಯಂತರ ತಾತ್ಕಾಲಿಕ ಪರಿಹಾರವನ್ನು ಮೇಲೆ ತಿಳಿಸಿದ ಸರ್ಕಾರದ ಆದೇಶದ ಕ್ರ.ಸಂ.6ರಲ್ಲಿ ಸೂಚಿಸಿದಂತೆ ಕ್ರಮ ವಹಿಸಲು ತಿಳಿಸಲಾಗಿದೆ.

ಮೇಲಿನ ಸರ್ಕಾರದ ನಿರ್ದೇಶನದ ಹಿನ್ನೆಲೆಯಲ್ಲಿ ಬೆಂಗಳೂರು ನಗರ ವಿಶ್ವವಿದ್ಯಾನಿಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪೂರ್ಣವಧಿ ಖಾಯಂ ಶಿಕ್ಷಕೇತರ ಸಿಬ್ಬಂದಿಗಳಿಗೆ ಅವರ ಮೂಲ ವೇತನದ ಶೇ.17ರಷ್ಟು ಮಧ್ಯಂತರ ಪರಿಹಾರವನ್ನು ವಿಶ್ವವಿದ್ಯಾನಿಲಯದ ಅಂತರಿಕ ಸಂಪನ್ಮೂಲದಿಂದ ಭರಿಸಬೇಕಾಗುತ್ತದೆ.

ಈ ಮಧ್ಯಂತರ ಪರಿಹಾರ ಪಾವತಿಗಾಗಿ ಪ್ರತಿ ತಿಂಗಳು ರೂ.1,01,523/– ಗಳನ್ನು ಲೆಕ್ಕಹಾಕಲಾಗಿದೆ. ಸದರಿ ಮೊತ್ತವನ್ನು ವಿಶ್ವವಿದ್ಯಾನಿಲಯದ ಅಂತರಿಕ ಸಂಪನ್ಮೂಲದಿಂದ ಭರಿಸಲು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ಸಿಂಡಿಕೇಟ್ ತೀರ್ಮಾನ:

**ಸರ್ಕಾರದ ಪ್ರಸ್ತಾವನೆಗೆ ಒಪ್ಪಿಗೆ ಸೂಚಿಸಿ, 2018ರ ಪರಿಷ್ಕೃತ ವೇತನ ಶ್ರೇಣಿಯ ವೇತನ ಪಡೆಯುವ ಪೂರ್ಣಾವಧಿ ಖಾಯಂ ಶಿಕ್ಷಕೇತರ ಸಿಬ್ಬಂದಿಗಳಿಗೆ 1.4.2023 ರಿಂದ ಅನ್ವಯವಾಗುವಂತೆ ಸಂದಾಯ ಮಾಡಬೇಕಾದ ಶೇಕಡಾ 17 ರಷ್ಟು ಮಧ್ಯಂತರ ಪರಿಹಾರವನ್ನು ವಿಶ್ವವಿದ್ಯಾನಿಲಯದ ಆಂತರಿಕ ಸಂಪನ್ಮೂಲದಿಂದ ಭರಿಸಲು ಒಪ್ಪಿಗೆ ನೀಡಲು ಸಭೆ ತೀರ್ಮಾನಿಸಿತು.**

**ಈ ಎಲ್ಲ ಹುದ್ದೆಗಳು ಸರ್ಕಾರದಿಂದ ಮಂಜೂರಾದ ಹುದ್ದೆಗಳಾಗಿರುವುದರಿಂದ ಈ ಹುದ್ದೆಗಳಿಗೆ ಅನ್ವಯವಾಗುವ ವೇತನ ಹಾಗೂ ಭತ್ಯೆಗಳನ್ನು ಸರ್ಕಾರ ಸಂದಾಯ ಮಾಡಬೇಕಾಗಿದ್ದು, ಮಧ್ಯಂತರ ಪರಿಹಾರ ಕೂಡ ವೇತನದ ಒಂದು ಭಾಗವಾಗಿರುವುದರಿಂದ ಸದರಿ ಮೊತ್ತವನ್ನು ಸರ್ಕಾರ ಅನುದಾನದ ರೂಪದಲ್ಲಿ ನೀಡಬೇಕೆಂದು ವಿನಂತಿಸಿ ಪತ್ರ ಬರೆಯಲು ಸಭೆ ಸೂಚನೆ ನೀಡಿತು.**

ವಿಷಯ ಸಂಖ್ಯೆ: 8

ವಿಷಯ: ಬೆಂಗಳೂರು ವಿಶ್ವವಿದ್ಯಾನಿಲಯದಿಂದ ಅಭಿಮತದ ಮೇರೆಗೆ ಬೆಂಗಳೂರು ನಗರ ವಿಶ್ವವಿದ್ಯಾನಿಲಯಕ್ಕೆ ವರ್ಗಾವಣೆಗೊಂಡು ಬಂದು ಕಾರ್ಯ ನಿರ್ವಹಿಸುತ್ತಿರುವ ನೌಕರರಿಗೆ ಮುಂಬಡ್ತಿ ನೀಡುವ ಬಗ್ಗೆ.

ಉಲ್ಲೇಖ:
1. ಸರ್ಕಾರಿ ಆದೇಶ ಸಂಖ್ಯೆ: ಇಡಿ 346 ಯುಬಿವಿ 2018 ದಿನಾಂಕ: 13.02.2019.
2. ಬೆಂಗಳೂರು ವಿಶ್ವವಿದ್ಯಾಲಯ ಆದೇಶ ಸಂಖ್ಯೆ: ಇಎಸ್‌ಟಿ-1/ಇ1/ತ್ರಿಭಜನೆ/2016 ದಿನಾಂಕ: 14.02.2019.
3. ವಿ.ವಿ. ಪರಿನಿಯಮಗಳ ಸಂಖ್ಯೆ: ಬೆಂ.ನ.ವಿ/ಕುಸಆ/100/2021-22 ದಿನಾಂಕ: 06.08.2021.

***ಪರಾಮರ್ಶಕ ಟಿಪ್ಪಣಿ:***

ಉಲ್ಲೇಖ(1) ಮತ್ತು (2)ರ ಆದೇಶಗಳ ಪ್ರಕಾರ ಬೆಂಗಳೂರು ವಿಶ್ವವಿದ್ಯಾಲಯದಿಂದ ಅಭಿಮತದ ಮೇರೆಗೆ ಬೆಂಗಳೂರು ನಗರ ವಿಶ್ವವಿದ್ಯಾನಿಲಯಕ್ಕೆ ವರ್ಗಾವಣೆಗೊಂಡು ಬಂದು ಕಾರ್ಯನಿರ್ವಹಿಸುತ್ತಿರುವ 1) ಶ್ರೀಮತಿ ಎ.ಕೆ. ಕವಿತಾ, ಅಧೀಕ್ಷಕರು, 2) ಶ್ರೀ ವೀರಣ್ಣ, ಸಹಾಯಕ ಇವರು ಕ್ರಮವಾಗಿ ಸಹಾಯಕ ಕುಲಸಚಿವರು ಮತ್ತು ಅಧೀಕ್ಷಕ ಹುದ್ದೆಗೆ ಮುಂಬಡ್ತಿ ನೀಡುವಂತೆ ಕೋರಿ ಮನವಿ ಸಲ್ಲಿಸಿರುತ್ತಾರೆ.

ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಬೋಧಕೇತರ ಸಿಬ್ಬಂದಿಗಳ ನೇಮಕಾತಿ ಪ್ರಕ್ರಿಯೆಗೆ ಅವಶ್ಯಕವಿರುವ ಸಿ&ಆರ್ ಪರಿನಿಯಮಗಳನ್ನು ರಚಿಸಿ, ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳ ಮುಂದೆ ಮಂಡಿಸಿ ಅನುಮೋದನೆ ಪಡೆದು ಈಗಾಗಲೇ ಉಲ್ಲೇಖ (03)ರ ಪತ್ರ ಮುಖೇನ ಕುಲಾಧಿಪತಿಗಳ ಅನುಮೋದನೆಗಾಗಿ ಸರ್ಕಾರಕ್ಕೆ ಸಲ್ಲಿಸಲಾಗಿದ್ದು, ಸರ್ಕಾರದ ದಿನಾಂಕ: 01.12.2021 ಮತ್ತು 16.05.2023ರ ಪತ್ರಗಳಲ್ಲಿ ಸೂಚಿಸಿದ ಪ್ರಕಾರ ತಿದ್ದುಪಡಿಗಳನ್ನು ಮಾಡಿ ಸರ್ಕಾರಕ್ಕೆ ಮರು ಸಲ್ಲಿಸಲಾಗಿದೆ. ಸರ್ಕಾರದಿಂದ ಇನ್ನೂ ಯಾವುದೇ ಮಾಹಿತಿ ಬಂದಿರುವುದಿಲ್ಲ. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ (ತಿದ್ದುಪಡಿ) ಅಧಿನಿಯಮ 2015 ಕಲಂ 7(2) Transitory provision ಪ್ರಕಾರ ಬೆಂಗಳೂರು ನಗರ ವಿಶ್ವವಿದ್ಯಾನಿಲಯ ತನ್ನದೇ ಆದ ಪರಿನಿಯಮಾವಳಿ ರಚಿಸಿಕೊಳ್ಳುವವರೆಗೆ ಬೆಂಗಳೂರು ವಿಶ್ವವಿದ್ಯಾಲಯವು ರಚಿಸಿಕೊಂಡಿರುವ ಎಲ್ಲಾ ಪರಿನಿಯಮಾವಳಿಗಳನ್ನು ಅನುಸರಿಸಬಹುದೆಂದು ಸೂಚಿಸಿರುತ್ತಾರೆ. ಅದರಂತೆ, ಬೆಂಗಳೂರು ವಿಶ್ವವಿದ್ಯಾಲಯದ ಪರಿನಿಯಮಗಳ ಪ್ರಕಾರ ಈಗಾಗಲೇ ಇಬ್ಬರು ನೌಕರರಿಗೆ ಸಹಾಯಕ ಹುದ್ದೆಯಿಂದ ಅಧೀಕ್ಷಕ ಹುದ್ದೆಗೆ ಹಾಗೂ ಕಿರಿಯ ಸಹಾಯಕ ಹುದ್ದೆಯಿಂದ ಸಹಾಯಕ ಹುದ್ದೆಗೆ ಪದೋನ್ನತಿ ನೀಡಲಾಗಿದೆ.

ಪ್ರಸ್ತುತ ಪದೋನ್ನತಿ ಕೋರಿ ಮನವಿ ಸಲ್ಲಿಸಿರುವ ಸಿಬ್ಬಂದಿಗಳ ಸೇವಾ ವಿವರ ಈ ಕೆಳಕಂಡಂತಿದ್ದು, ಅವರುಗಳ ಹೆಸರಿನ ಮುಂದೆ ನಮೂದಿಸಿರುವ ದಿನಾಂಕಕ್ಕೆ ವಯೋನಿವೃತ್ತಿ ಹೊಂದಲಿದ್ದಾರೆ, ಅತ್ಯಂತ ಅಲ್ಪಾವಧಿ ಸೇವೆ ಬಾಕಿ ಇರುತ್ತದೆ.

| ಕ್ರಮ. ಸಂಖ್ಯೆ | ನೌಕರರು ಹೆಸರು ವಿಭಾಗ | Date of birth | Date of Retirement | Section | Qualification | Caste | Date of Appointment |
|---|---|---|---|---|---|---|---|
| 1. | ಶ್ರೀಮತಿ ಎ.ಕೆ.ಕವಿತಾ | 03.04.1964 | 30.04.2024 | ಶೈಕ್ಷಣಿಕ ವಿಭಾಗ | ಬಿ.ಕಾಂ | ಸಾಮಾನ್ಯ | Junior Asst.- 01.02.1993<br>Asst.- 29.10.2009<br>Senior Asst. 29.09.2016<br>Superintendent – 30.08.2017 |
| 2. | ಶ್ರೀ ವೀರಣ್ಣ | 01.06.1965 | 31.05.2025 | ಹಣಕಾಸು ವಿಭಾಗ | ಎಸ್.ಎಸ್.ಎಲ್.ಸಿ | ಸಾಮಾನ್ಯ | Junior Asst.- 01.12.1997<br>Asst.- 02.04.2012 |

ಸಿ&ಆರ್ ನಿಯಮದ ಪ್ರಕಾರ ಮುಂಬಡ್ತಿ ನೀಡಲು ಇರುವ ಅವಕಾಶ: ಅಧೀಕ್ಷಕ ಹುದ್ದೆಯಿಂದ ಸಹಾಯಕ ಕುಲಸಚಿವರ ಹುದ್ದೆಗೆ ಪದೋನ್ನತಿ ಹೊಂದಲು ಈ ಕೆಳಕಂಡ ಅರ್ಹತೆಗಳನ್ನು ನಿಗದಿಪಡಿಸಲಾಗಿದೆ.

| Category of post | Pay Scale | Minimum Qualification | Probation period | Method of Recruitment |
|---|---|---|---|---|
| Assistant Registrar | 52,650-73,000 | a) Graduate with Good Academic record<br>b) Administrative experience of not less than 5 year in a Government Institution or in a University | Two year | Either by direct recruitment or by promotion by selection from the cadre of superintendent |

ಸಹಾಯಕ ಹುದ್ದೆಯಿಂದ ಅಧೀಕ್ಷಕರ ಹುದ್ದೆಗೆ ಪದೋನ್ನತಿ ಹೊಂದಲು ಈ ಕೆಳಕಂಡ ಅರ್ಹತೆಗಳನ್ನು ನಿಗದಿಪಡಿಸಲಾಗಿದೆ.

| Category of Post | Pay Scale | Minimum qualification prescribed |
|---|---|---|
| Superintendent | | For promotion<br>A Assistant must have passed the prescribed departmental exam and must have put in at least 02 year service as Sr. Asst. or 10 year as Assistant |

ಅದುದರಿಂದ ಈ ನೌಕರರ ಮನವಿಗಳನ್ನು ಪರಿಗಣಿಸಿ ಬೆಂಗಳೂರು ವಿಶ್ವವಿದ್ಯಾಲಯದ ಸಿ&ಆರ್ ನಿಯಮಗಳನ್ನು ಈಗಾಗಲೇ ಬೆಂಗಳೂರು ನಗರ ವಿಶ್ವವಿದ್ಯಾನಿಲಯದಲ್ಲಿ ಅಳವಡಿಸಿಕೊಂಡು ಕ್ರಮವಹಿಸಿದ್ದು, ಅದಕ್ಕಾನುಗುಣವಾಗಿ ಅವರುಗಳಿಗೆ ಪದೋನ್ನತಿ ನೀಡುವ ವಿಷಯವನ್ನು ಸಿಂಡಿಕೇಟ್ ಸಭೆಯ ಮುಂದೆ ಪರಿಶೀಲನೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

**ಸಿಂಡಿಕೇಟ್ ತೀರ್ಮಾನ:**

ಬೆಂಗಳೂರು ವಿಶ್ವವಿದ್ಯಾನಿಲಯದ ಸಿ & ಆರ್ ನಿಯಮಗಳಂತೆ, ಅರ್ಹತೆ ಹೊಂದಿದ ಸಿಬ್ಬಂದಿಗಳಿಗೆ ಇಲಾಖಾ ಮುಂಬಡ್ತಿ ಸಮಿತಿಯ ಮುಂದೆ ಮಂಡಿಸಿ, ಸಮಿತಿಯ ಶಿಫಾರಸ್ಸಿನಂತೆ ಅಧೀಕ್ಷಕರು ಮತ್ತು ಸಹಾಯಕ ಕುಲಸಚಿವರಾಗಿ ಮುಂಬಡ್ತಿ ಆದೇಶ ನೀಡಲು ಸಿಂಡಿಕೇಟ್ ಸಭೆ ಒಪ್ಪಿಗೆ ನೀಡಿತು.

**ವಿಷಯ ಸಂಖ್ಯೆ: 9**

ವಿಷಯ: ವಾಣಿಜ್ಯಶಾಸ್ತ್ರ ವಿಭಾಗಕ್ಕೆ ಮುಖ್ಯಸ್ಥರನ್ನು ನೇಮಕ ಮಾಡಿ ಆದೇಶ ಹೊರಡಿಸಿರುವ ಕ್ರಮದ ಘಟನೋತ್ತರ ಅನುಮೋದನೆ ಬಗ್ಗೆ.

ಉಲ್ಲೇಖ:
1. ವಿ.ವಿ. ಆದೇಶ ಸಂಖ್ಯೆ: ಬಿಸಿಯು/ಸಿಬ್ಬಂದಿ/ಮು.ನೇ/2022-23/1032 ದಿನಾಂಕ: 28.02.2023.
2. ವಿ.ವಿ. ಬಿಡುಗಡೆ ಆದೇಶ ಸಂಖ್ಯೆ: ಬೆಂ.ನ.ವಿ/ಸಿಬ್ಬಂದಿ 1&2/ಬಿ.ಆ/2023-24 ದಿನಾಂಕ: 26.05.2023
3. ವಿ.ವಿ. ಆದೇಶ ಸಂಖ್ಯೆ: ಬಿಸಿಯು/ಸಿಬ್ಬಂದಿ/ಮು.ನೇ/ವಾ.ವಿ/2023-24/67 ದಿನಾಂಕ: 25.05.2023.

***ಪರಾಮರ್ಶಕ ಟಿಪ್ಪಣಿ:***

ವಿಶ್ವವಿದ್ಯಾನಿಲಯದ ವಾಣಿಜ್ಯಶಾಸ್ತ್ರ ಸ್ನಾತಕೋತ್ತರ ಅಧ್ಯಯನ ವಿಭಾಗಕ್ಕೆ ಉಲ್ಲೇಖ (1)ರ ಆದೇಶದ ಪ್ರಕಾರ ದಿನಾಂಕ: 31.05.2023ರವರೆಗೆ ವಿಭಾಗದ ಅಧ್ಯಕ್ಷರಾಗಿ ನೇಮಕ ಮಾಡಲಾಗಿತ್ತು. ಸದರಿ ಪ್ರಾಧ್ಯಾಪಕರು ಉಲ್ಲೇಖ (2) ರ ಪ್ರಕಾರ ದಿನಾಂಕ: 31.05.2023ಕ್ಕೆ ವಿಶ್ವವಿದ್ಯಾನಿಲಯ ಸೇವೆಯಿಂದ ವಯೋನಿವೃತ್ತಿ ಹೊಂದಿರುತ್ತಾರೆ. ಅಧ್ಯಕ್ಷರ ಅವಧಿ ಕಾಲಂ "5"ರಲ್ಲಿ ಸೂಚಿಸಿರುವ ದಿನಾಂಕದಂದು ಕೊನೆಗೊಂಡಿರುತ್ತದೆ.

| ಕ್ರಮ. ಸಂಖ್ಯೆ | ಹೆಸರು | ಮುಖ್ಯಸ್ಥರನ್ನಾಗಿ ಕಾರ್ಯನಿರ್ವಹಿಸುತ್ತಿರುವ ವಿಭಾಗ | ಮುಖ್ಯಸ್ಥರಾಗಿ ನೇಮಕಗೊಂಡ ದಿನಾಂಕ: | ಅವಧಿ ಕೊನೆಗೊಳ್ಳುವ ದಿನಾಂಕ |
|---|---|---|---|---|
| (1) | (2) | (3) | (4) | (5) |
| 1. | ಡಾ.ಎಂ.ಮುನಿರಾಜು, ಪ್ರಾಧ್ಯಾಪಕರು, | ವಾಣಿಜ್ಯಶಾಸ್ತ್ರ ವಿಭಾಗ | 27.02.2023 | 31.05.2023 |

ಡಾ.ಎಂ.ಮುನಿನಾರಾಯಣಪ್ಪ, ಪ್ರಾಧ್ಯಾಪಕರ ಅವರ ವಿರುದ್ಧ ಐಸಿಸಿ ವಿಚಾರಣೆ ಬಾಕಿ ಇರುವುದರಿಂದ ಅವರಿಗೆ ಯಾವುದೇ ಜವಾಬ್ದಾರಿ ಸ್ಥಾನಗಳನ್ನು ನೀಡದೇ ಇರಲು ದಿನಾಂಕ: 15.03.2023ರಂದು ಜರುಗಿದ ಸಿಂಡಿಕೇಟ್ ಸಭೆಯಲ್ಲಿ ನಿರ್ಣಯಿಸಲಾಗಿರುತ್ತದೆ.

ಬೆಂಗಳೂರು ವಿಶ್ವವಿದ್ಯಾನಿಲಯದ ಅಧಿಸೂಚನೆ ದಿನಾಂಕ: 11.11.1991ರ ಪರಿನಿಯಮ "Statute Pertaining to Appointment of Chairman, Department of Studies/ Departmental Council by Rotation" ರ ಪ್ರಕಾರ ವಿಭಾಗಗಳಲ್ಲಿ ಪ್ರಾಧ್ಯಾಪಕರು ಯಾರು ಇಲ್ಲದೇ ಇದ್ದಲ್ಲಿ ಸಹ ಪ್ರಾಧ್ಯಾಪಕರನ್ನೇ ಆಯಾ ವಿಭಾಗದ ಮುಖ್ಯಸ್ಥರನ್ನಾಗಿ ನೇಮಕಾತಿ ಮಾಡಲು ಅವಕಾಶವಿರುವಂತೆ, ಶೈಕ್ಷಣಿಕ ಮತ್ತು ಆಡಳಿತಾತ್ಮಕ ಹಿತದೃಷ್ಟಿಯಿಂದ ಕೆಳಗೆ ನಮೂದಿಸಿರುವ ಸಹ-ಪ್ರಾಧ್ಯಾಪಕರುನ್ನು ಅವರ ಹೆಸರಿನ ಮುಂದೆ ನಮೂದಿಸಿರುವ ದಿನಾಂಕದಿಂದ 02 ವರ್ಷ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ವಾಣಿಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥರನ್ನಾಗಿ ನೇಮಕಾತಿ ಮಾಡಿ ಉಲ್ಲೇಖ(3)ರಲ್ಲಿ ಆದೇಶ ಹೊರಡಿಸಲಾಗಿರುತ್ತದೆ.

| ಕ್ರಮ. ಸಂಖ್ಯೆ | ಹೆಸರು | ವಿಭಾಗ | ಅವಧಿ ಪ್ರಾರಂಭಗೊಳ್ಳುವ ದಿನಾಂಕ |
|---|---|---|---|
| 1. | ಡಾ. ಕೆ.ಆರ್ ಜಲಜ, ಸಹ ಪ್ರಾಧ್ಯಾಪಕರು, | ವಾಣಿಜ್ಯಶಾಸ್ತ್ರ ವಿಭಾಗ | 01.06.2023 |

ಮೇಲಿನ ವಿಷಯವನ್ನು ಸಿಂಡಿಕೇಟ್ ಸಭೆಯ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ.

ಸಿಂಡಿಕೇಟ್ ತೀರ್ಮಾನ:

**ಡಾ. ಕೆ. ಆರ್ ಜಲಜಾ ಅವರನ್ನು ದಿನಾಂಕ 01.06.2023 ರಿಂದ ವಾಣಿಜ್ಯಶಾಸ್ತ್ರ ವಿಭಾಗದ ಅಧ್ಯಕ್ಷರಾಗಿ ನೇಮಕ ಮಾಡಿರುವ ಕ್ರಮಕ್ಕೆ ಘಟನೋತ್ತರ ಅನುಮೋದನೆ ನೀಡಲು ಸಭೆ ತೀರ್ಮಾನಿಸಿತು.**

ವಿಷಯ ಸಂಖ್ಯೆ: 10

Sub: Visiting Scholar Report of Prof. Lingaraj Gandhi regarding the visit to Wolverhampton University, UK fFrom 15th July to 23rd July 2023.

***Reference Note:***

In pursuance of the invitation of the Dean, Faculty of Science and Engineering, Wolverhampton University and approval of the Hon'ble Chancellor communicated through the Raj Bhavan Order dated 12.078.2023, Prof. Lingaraja Gandhi, Vice-Chancellor visited the University of Wolverhampton from 15th July 2023 to 23rd July 2023 as a Visiting Scholar, to work on a Project "Sustainable SMART Cities Coping with Crisis, Lessons from a Global Pandemic".

Prof. Lingaraja Gandhi, Hon'ble Vice-Chancellor alongwith the Research Team consisting of Dr. Suresh Renukappa and Dr. Subhashini Suresh drafted the Visiting Scholar Report on the activities conducted during the visit. The report is enclosed.

During the visit discussions were held on various contemporary and strategic issues such as

- Overview of Research and Postgraduate Research Programme,
- Role of microbes in circular economy - From trash to treasure.
- Future Mobility
- Research Institutes for Health Sciences,
- Construction Future Research Centre.
- Centre for Engineering Innovation and Research
- Centre for Materials Science Research
- Digital Innovation and Solution Centre.

A Memorandum of Understanding was signed by Prof. Lingaraja Gandhi, Vice-Chancellors of Bengaluru City University and Prof. John Raftery, University of Wolverhampton University aiming to work together to maximise the benefits from the mutual interests in research and teaching collaboration.

Further during the visit, Prof. Gandhi worked with the Research Team on

i) A Conference Paper
ii) A British Council grant and
iii) Hosting an International workshop on Delivering Digital Healthcare Strategies in August 2023 – to bring together experts from Academia, Corporate Sector and the Government to discuss many facets of implementing AYUSHMAN BHARATH DIGITAL MISSION (ABDM).

The details of the above three activities are given in the enclosed "Visiting Scholar Report"

The matter is placed before the Syndicate for perusal and approval.

ಸಿಂಡಿಕೇಟ್ ತೀರ್ಮಾನ:

ಮಾನ್ಯ ಕುಲಪತಿಗಳ ಯು.ಕೆ ದೇಶದ ವೊಲ್ವರ್‌ಹ್ಯಾಂಪ್ಟನ್ ವಿಶ್ವವಿದ್ಯಾನಿಲಯದ ಆಹ್ವಾನದ ಮೇರೆಗೆ ಭೇಟಿ ನೀಡಿ ಅಲ್ಲಿಯ **"Sustainable SMART Cities Coping with Crisis, Lessons from a Global Pandemic"** ಸಂಶೋಧನಾ ಯೋಜನೆಯಲ್ಲಿ ಸಂಶೋಧಕ ವಿದ್ವಾಂಸರಾಗಿ ಭಾಗವಹಿಸಿ ತಮ್ಮ ಜ್ಞಾನ ಹಾಗೂ ಅನುಭವದ ಕೊಡುಗೆಯನ್ನು ಯೋಜನೆಗೆ ನೀಡಿರುವುದನ್ನು ಹಾಗೂ ಈ ಸಂದರ್ಭದಲ್ಲಿ ಬೆಂಗಳೂರು ನಗರ ವಿಶ್ವವಿದ್ಯಾನಿಲಯದೊಂದಿಗೆ ಪರಸ್ಪರ ಶೈಕ್ಷಣಿಕ ಹಾಗೂ ಸಂಶೋಧನಾ ಸಹಯೋಗಕ್ಕಾಗಿ ಒಡಂಬಡಿಕೆ ಪತ್ರಗಳಿಗೆ ಸಹಿ ಹಾಕಿರುವುದನ್ನು ಶ್ಲಾಘಿಸಿ ಅನುಮೋದನೆ ನೀಡಿ ಅಭಿನಂದನೆಗಳನ್ನು ವ್ಯಕ್ತಪಡಿಸಲಾಯಿತು.

ಆಗಸ್ಟ್ ತಿಂಗಳಲ್ಲಿ ವೊಲ್ವರ್‌ಹ್ಯಾಂಪ್ಟನ್ ವಿಶ್ವವಿದ್ಯಾನಿಲಯ ಹಾಗೂ ಬೆಂಗಳೂರು ನಗರ ವಿಶ್ವವಿದ್ಯಾನಿಲಯಗಳ ಒಳಗೊಂಡಂತೆ **Digital Health Care Strategies** ಕುರಿತಂತೆ ಆಯೋಜಿಸುವ ಕಾರ್ಯಾಗಾರದಲ್ಲಿ ಕೇಂದ್ರ ಸರ್ಕಾರ "ಆಯುಷ್ಮಾನ್ ಭಾರತ ಡಿಜಿಟಲ್ ಮಿಶನ್" ಕುರಿತು ಚರ್ಚೆ ನಡೆಯುವುದನ್ನು ಗಮನಿಸಿ ಅನುಮೋದನೆ ನೀಡಲಾಯಿತು.

**ವಿಷಯ ಸಂಖ್ಯೆ: 11**

ವಿಷಯ: 2021–22ನೇ ಸಾಲಿನ ಕರ್ನಾಟಕ ಸರ್ಕಾರದ ಆಯವ್ಯಯದಲ್ಲಿ ಘೋಷಣೆಯಂತೆ ಸಮಾಜ ಕಲ್ಯಾಣ ಇಲಾಖೆಯಿಂದ ಜಿಲ್ಲಾ ಕೇಂದ್ರಗಳಲ್ಲಿ 35 ಮೆಟ್ರಿಕ್ ನಂತರದ ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಲು ಸರ್ಕಾರದ ಆದೇಶದಲ್ಲಿ ಮಂಜೂರಾತಿ ನೀಡಿ ಆದೇಶಿಸಿದೆ. ಈ ಪೈಕಿ ಬೆಂಗಳೂರು ನಗರ ಜಿಲ್ಲೆಗೆ ಸೇರಿದ ಬೆಂಗಳೂರ ನಗರ ವಿಶ್ವವಿದ್ಯಾನಿಲಯಕ್ಕೆ 2 ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಲು ಮಂಜೂರಾತಿ ನೀಡಿ ಕಟ್ಟಡದ ನಿರ್ಮಾಣಕ್ಕೆ ಬೇಕಾಗಿರುವ ನಿವೇಶನವನ್ನು ಸಮಾಜ ಕಲ್ಯಾಣ ಇಲಾಖೆಗೆ ಹಸ್ತಾಂತರಿಸುವ ಬಗ್ಗೆ

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆ: ಸಕಇ/ 146/ ಪಕವಿ/2021 ದಿನಾಂಕ:23.09.2021
2. ಆಯುಕ್ತರು, ಸಕಇ ರವರ ಪತ್ರ ಸಂಖ್ಯೆ: ಸಕನಿ/ಇಡಿ–6/ಹೊವಿನಿ/ಸಿಆರ್ 1/2021–22 ದಿನಾಂಕ:27.04.2021 ಮತ್ತು ದಿನಾಂಕ:13.10.2021
3. ಸಂಖ್ಯೆ: ಸಕನಿ/ ಇಡಿ/6/ಹೊವಿನಿ/ಸಿಆರ್/01/2020–2021 ದಿನಾಂಕ:07.03.2022
4. ಸರ್ಕಾರದ ಆದೇಶ ಸಂಖ್ಯೆ: ಸಕಇ/146/ಪಕವಿ/2021 ದಿನಾಂಕ:17.05.2022
5. ಸಂಖ್ಯೆ:ಜಂನಿ/ಸಕಇ/ಬೆಂ(ನ)/SCSP/ಹೊವಿನಿ/ಸಿಆರ್/02/2022–23 ದಿನಾಂಕ:29.04.2022
6. ಸಂಖ್ಯೆ:ಸನಿ/ಸಕಇ/ಬೆಂ(ಉ)ಪವವಿನಿ/ಸಿಆರ್/01/2022–23 ದಿನಾಂಕ:26.05.2023

ಪರಾಮರ್ಶಕ ಟಿಪ್ಪಣಿ:

ಮೇಲೆ ವಿವರಿಸಲಾಗಿರುವ ಉಲ್ಲೇಖದ ಕ್ರಮಸಂಖ್ಯೆ 1ರಲ್ಲಿ 2021–22ನೇ ಸಾಲಿನ ಆಯವ್ಯಯದ ಘೋಷಣೆಯಂತೆ ಸಮಾಜ ಕಲ್ಯಾಣ ಇಲಾಖಾ ವತಿಯಿಂದ ಜಿಲ್ಲಾ ಕೇಂದ್ರಗಳಲ್ಲಿ 35 ಮೆಟ್ರಿಕ್ ನಂತರದ ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿ ನಿಲಯಗಳನ್ನು ಪ್ರಾರಂಭಿಸಲು ಮಂಜೂರಾತಿ ನೀಡಿ ಆದೇಶಿಸಿದ್ದು, ಆ ಪೈಕಿ

ಬೆಂಗಳೂರು ನಗರ ವಿಶ್ವವಿದ್ಯಾನಿಲಯಕ್ಕೆ 2 ವಿದ್ಯಾರ್ಥಿ ನಿಲಯಗಳನ್ನು ಪ್ರಾರಂಭಿಸಲು ಮಂಜೂರಾತಿ ನೀಡಿ ಆದೇಶಿಸಿದೆ.

ಕ್ರಮಸಂಖ್ಯೆ 2ರ ಉಲ್ಲೇಖದಲ್ಲಿ ಜಿಲ್ಲಾ ಕೇಂದ್ರಗಳಲ್ಲಿ ಮಂಜೂರು ಮಾಡಲಾಗಿರುವ ವಿದ್ಯಾರ್ಥಿನಿಲಯಗಳ ನಿರ್ವಹಣೆಗಾಗಿ ಬೇಕಾಗಿರುವ ಸಿಬ್ಬಂದಿಗಳನ್ನು ಮಂಜೂರು ಮಾಡಲು ಸಮಾಜ ಕಲ್ಯಾಣ ಇಲಾಖೆ ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಇದಕ್ಕೆ ಆರ್ಥಿಕ ಇಲಾಖೆಯ ಅನುಮತಿ ಸಂಖ್ಯೆ:ಆಇ/388/ಎಪ್.ಆರ್.ಸಿ/2021 ದಿನಾಂಕ:13.04.2022 ರಂದು ಸಹಮತಿ ನೀಡಿದ ಮೇರೆಗೆ ಉಲ್ಲೇಖ 3ರಲ್ಲಿ ಸರ್ಕಾರವು ಆದೇಶ ಹೊರಡಿಸಿದ್ದು, ಆ ಪ್ರಕಾರ ಬಾಲಕರ ವಿದ್ಯಾರ್ಥಿನಿಲಯಕ್ಕೆ ವಾರ್ಡನ್‌ನಿಂದ ಅಡುಗೆ ಸಹಾಯಕರ ಹುದ್ದೆವರೆಗೆ 6 ಸಿಬ್ಬಂದಿಗಳನ್ನು ಹಾಗೂ ಬಾಲಕಿಯರ ವಿದ್ಯಾರ್ಥಿನಿಲಯಕ್ಕೆ ರಾತ್ರಿ ಕಾವಲುಗಾರರನ್ನು ಒಳಗೊಂಡು 7 ಸಿಬ್ಬಂದಿಗಳನ್ನು ಸೃಜಿಸಿ ಮಂಜೂರಾತಿ ನೀಡಿ ಆದೇಶಿಸಿದೆ. ಆ ಪ್ರಕಾರ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ 2 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಿಗೆ ಮಂಜೂರಾಗಿರುವ 6+7 ಒಟ್ಟು 13 ಹುದ್ದೆಗಳಿಗೆ ತಗಲುವ ವೇತನ ಮತ್ತು ಇತರೆ ವೆಚ್ಚಗಳನ್ನು ಸಮಾಜ ಕಲ್ಯಾಣ ಇಲಾಖೆಯೆ ಭರಿಸುತ್ತದೆ.

ಉಲ್ಲೇಖ 4ರಲ್ಲಿ ಆಯುಕ್ತರು ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ರವರು ರಾಜ್ಯದ 22 ಜಿಲ್ಲೆಗಳ ಜಂಟಿ/ಉಪನಿರ್ದೇಶಕರುಗಳಿಗೆ ಪತ್ರ ಬರೆದು 35 ವಿದ್ಯಾರ್ಥಿನಿಲಯಗಳನ್ನು ಮಂಜೂರು ಮಾಡಿ ಆದೇಶ ಹೊರಡಿಸಿ, ಮಂಜೂರಾಗಿರುವ ಸ್ಥಳದಲ್ಲಿ ವಿದ್ಯಾರ್ಥಿನಿಲಯಗಳಿಗೆ ಸ್ವಂತ ಕಟ್ಟಡವನ್ನು ನಿರ್ಮಿಸಲು ಬೇಕಾಗಿರುವ ಅಗತ್ಯವಿರುವ ನಿವೇಶನವನ್ನು ಪಡೆಯಲು ಕ್ರಮಕೈಗೊಳ್ಳುವಂತೆ ಸೂಚಿಸಿರುತ್ತಾರೆ. ಆ ಸೂಚನೆಯ ಮೇರೆಗೆ ಉಲ್ಲೇಖ 5ರಲ್ಲಿ ಜಂಟಿ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ ಬೆಂಗಳೂರು ನಗರ ಜಿಲ್ಲೆರವರು ದಿನಾಂಕ:29.04.2022ರಂದು ಕುಲಸಚಿವರು ಬೆಂಗಳೂರು ನಗರ ವಿಶ್ವವಿದ್ಯಾನಿಲಯ ರವರಿಗೆ ಪತ್ರ ವ್ಯವಹರಿಸಿ ಬೆಂಗಳೂರು ನಗರ ಜಿಲ್ಲೆಗೆ ಮಂಜೂರಾಗಿರುವ 2 ವಿದ್ಯಾರ್ಥಿ ನಿಲಯಗಳನ್ನು ನಿರ್ಮಿಸಲು ಅಗತ್ಯವಾಗಿ ಬೇಕಾಗಿರುವ ತಲಾ 20ಗುಂಟೆ ನಿವೇಶನವನ್ನು ಸಮಾಜ ಕಲ್ಯಾಣ ಇಲಾಖೆ ವಶಕ್ಕೆ ಹಸ್ತಾಂತರಿಸಬೇಕೆಂದು ಕೋರಿ ಪತ್ರ ಬರೆದಿರುತ್ತಾರೆ.

ಉಲ್ಲೇಖ 6ರಲ್ಲಿ ಸಹಾಯಕ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ಉತ್ತರ ತಾಲ್ಲೂಕು, ಯಲಹಂಕ ರವರು ದಿನಾಂಕ:26.05.2023ರಂದು ಬೆಂಗಳೂರು ನಗರ ವಿಶ್ವವಿದ್ಯಾನಿಲಯಕ್ಕೆ ಪತ್ರ ಬರೆದು ವಿದ್ಯಾರ್ಥಿ ನಿಲಯಗಳ ಕಟ್ಟಡವನ್ನು ನಿರ್ಮಿಸಲು ಗುರುತಿಸಿರುವ ನಿವೇಶನವನ್ನು ನಕ್ಷೆ ಮತ್ತು ದಾಖಲಾತಿಗಳೊಂದಿಗೆ ಸಮಾಜ ಕಲ್ಯಾಣ ಇಲಾಖೆಗೆ ವಹಿಸಲು ಕೋರಿರುತ್ತಾರೆ. ಸದರಿ ಕಟ್ಟಡವನ್ನು ನಿರ್ಮಿಸಲು KREIS ಸಂಸ್ಥೆಗೆ ವಹಿಸಲು ತಿರ್ಮಾನ ಕೈಗೊಂಡಿದ್ದು, ಕಟ್ಟಡ ನಿರ್ಮಾಣವಾದ ನಂತರ ಅವುಗಳಿಗೆ ಬೇಕಾದ ಮೂಲಭೂತ ಸೌಕರ್ಯಗಳಾದ ಹಾಸಿಗೆ, ಹೊದಿಕೆ, ಮಂಚ, ಪೀಠೋಪಕರಣ, ಇತ್ಯಾದಿಗಳನ್ನು ಪ್ರತ್ಯೇಕವಾಗಿ ಪೂರೈಸಲು ಸಮಾಜ ಕಲ್ಯಾಣ ಇಲಾಖೆಯೆ ಟೆಂಡರ್ ಕರೆಯಲು ಕ್ರಮ ಕೈಗೊಳ್ಳಲಾಗುವುದೆಂದು ಜಂಟಿ ನಿರ್ದೇಶಕರು, ಸಕಇ ಬೆಂಗಳೂರು ನಗರ ಜಿಲ್ಲೆರವರು ತಿಳಿಸಿರುತ್ತಾರೆ.

100 ಸಂಖ್ಯಾ ಬಲದ ವಿದ್ಯಾರ್ಥಿನಿಲಯವನ್ನು ನಿರ್ಮಿಸಲು ರೂ.5.50ಕೋಟಿಗಳಲ್ಲಿ ಅಂದಾಜು ವೆಚ್ಚದಲ್ಲಿ KREIS ಸಂಸ್ಥೆಯಿಂದ Type Design ನ್ನು ಸಿದ್ಧಪಡಿಸಿರುವ ಬಗ್ಗೆಯು ತಿಳಿಸಿರುತ್ತಾರೆ, ಬೆಂಗಳೂರು ನಗರ ವಿಶ್ವವಿದ್ಯಾನಿಲಯಕ್ಕೆ ಮಂಜೂರಾಗಿರುವ ವಿದ್ಯಾರ್ಥಿನಿಲಯಗಳಲ್ಲಿ ಪ.ಜಾ ಮತ್ತು ಪ.ಪಂ ಹಾಗೂ ಹಿಂದುಳಿದ ವರ್ಗಗಳ ಒಟ್ಟು 350 ಬಾಲಕ ವಿದ್ಯಾರ್ಥಿಗಳಿಗೆ ವಾಸ್ತವ್ಯ ಮಾಡಲು ಅವಕಾಶ ಮಾಡಿಕೊಡಬೇಕಾಗಿದೆ. ಅದೇ ರೀತಿಯಾಗಿ 250 ಬಾಲಕಿಯರಿಗೂ ಅವಕಾಶವನ್ನು ಮಾಡಿಕೊಡಬೇಕಾಗಿದೆ. ಇದರ ಸಂಪೂರ್ಣ ವೆಚ್ಚ ಮತ್ತು ನಿರ್ವಹಣೆಯನ್ನು ಸಮಾಜ ಕಲ್ಯಾಣ ಇಲಾಖೆಯು ಭರಿಸಲಾಗುವುದು.

ಆ ಕಾರಣ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಪಿ.ಕೆ ಬ್ಲಾಕ್‌ನಲ್ಲಿರುವ ಬಾಲಕಿಯರ ವಿದ್ಯಾರ್ಥಿನಿಲಯವು ತುಂಬಾ ಹಳೆಯದಾಗಿದ್ದು, ವಾಸ್ತವ್ಯಕ್ಕೆ ಯೋಗ್ಯವಾಗಿಲ್ಲದಿರುವುದರಿಂದ ಸದರಿ ಕಟ್ಟಡವನ್ನು ಕೆಡವಿ ಆ ಜಾಗದಲ್ಲಿ ಬಾಲಕಿಯರಿಗೆ ಬಹು ಅಂತಸ್ತಿನ ಕಟ್ಟಡವನ್ನು ನಿರ್ಮಿಸಲು ಸೂಕ್ತವಾಗಿರುವುದರಿಂದ ಹಾಗೂ ಅದರ ಸುತ್ತಮುತ್ತಲಿರುವ ಖಾಲಿ ನಿವೇಶನದ ಒಟ್ಟು ವಿಸ್ತೀರ್ಣ 4389.13 ಚದುರ ಮೀಟರ್ (1.08) ಎಕರೆ ಜಮೀನನ್ನು ಹಸ್ತಾಂತರಿಸಬಹುದಾಗಿದೆ ಎಂದು ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಇಂಜಿನಿಯರಿಂಗ್ ವಿಭಾಗದ ಇಂಜಿನಿಯರ್ ರವರು ವರದಿ ಮಾಡಿರುತ್ತಾರೆ.

ಈ ಎರಡು ವಿದ್ಯಾರ್ಥಿನಿಲಯಗಳ ಕಟ್ಟಡದ ನಿರ್ಮಾಣಕ್ಕಾಗಿ ತಲಾ 20ಗುಂಟೆಯಂತೆ ಒಟ್ಟು 40 ಗುಂಟೆಯ ನಿವೇಶನವನ್ನು ಸಮಾಜ ಕಲ್ಯಾಣ ಇಲಾಖೆಗೆ ಹಸ್ತಾಂತರಿಸುವ ಬಗ್ಗೆ ಚರ್ಚಿಸಲು ಮತ್ತು ತೀರ್ಮಾನವನ್ನು ಕೈಗೊಳ್ಳಲು ಸಿಂಡಿಕೇಟ್ ಸಭೆಯಲ್ಲಿ ಮಂಡಿಸಲಾಗಿದೆ.

**ವಿವರಣೆ:**

1. ಸದಸ್ಯರಾದ ಶ್ರೀ ಎಂ.ವಿ. ರಂಗಪ್ಪನವರು ಬೆಂಗಳೂರು ನಗರ ಜಿಲ್ಲೆಗೆ ಎರಡು ಹಾಸ್ಟಲ್‌ಗಳು ಎಂದು ನಮೂದಿಸಲಾಗಿದ್ದು, ಇದರಿಂದಾಗಿ ಈ ಹಾಸ್ಟಲ್‌ಗಳು ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ ಮಾತ್ರ ಒದಸಗಿಸುವ ಬಗ್ಗೆ ಸ್ಪಷ್ಟತೆ ಇಲ್ಲ ಎಂದು ಹೇಳಿದರು.

2. ಕುಲಸಚಿವರು ವಿವರಣೆ ನೀಡಿ, ದಾಖಲೆಗಳ ಆಧಾರದ ಮೇಲೆ ಈ 2 ಹಾಸ್ಟಲ್‌ಗಳು ಬೆಂಗಳೂರು ನಗರ ಜಿಲ್ಲೆಗಾಗಿ ಮಂಜೂರಾಗಿರುತ್ತವೆ. ಈ ಕುರಿತು ಸಮಾಜ ಕಲ್ಯಾಣ ಇಲಾಖೆಯಿಂದ ಹೆಚ್ಚಿನ ಮಾಹಿತಿ ಪಡೆಯಲಾಗುವುದು ಎಂದು ಹೇಳಿದರು.

3. ಸದಸ್ಯರಾದ ಶ್ರೀ ಕೆ. ಎಂ. ಮಹೇಶ್ ರವರು ನಗರದ ಜಯನಗರ ಬಡಾವಣೆಯಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಒಂದು ಮಹಿಳಾ ಹಾಸ್ಟಲ್ ಕಟ್ಟಡವಿದ್ದು, ಈ ಕಟ್ಟಡ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುತ್ತದೆ. ಅದನ್ನು ಪಡೆದುಕೊಂಡರೆ, ಮಹಿಳಾ ವಿದ್ಯಾರ್ಥಿಗಳಿಗಾಗಿ ಆ ಕಟ್ಟಡವನ್ನು ನವೀಕರಿಸಿ ಹಾಸ್ಟಲ್ ಅವಕಾಶ ಕಲ್ಪಿಸಬಹುದು ಎಂದು ತಿಳಿಸಿದರು.

4. ಸದಸ್ಯರಾದ ಶ್ರೀ ಎಂ. ವಿ. ರಂಗಪ್ಪನವರು, ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಆವರಣದಲ್ಲಿ ವಿದ್ಯಾರ್ಥಿಗಳು ಹಾಸ್ಟಲ್ ಹಾಗೂ ಇನ್ನಿತರ ಸೌಲಭ್ಯಕ್ಕಗಿ 5 ಎಕರೆ ಜಮೀನು ಪಡೆಯಲು ಪ್ರಯತ್ನಿಸಬೇಕೆಂದು ತಿಳಿಸಿದರು ಇದಲ್ಲದೆ, BDA ವ್ಯಾಪ್ತಿಯಲ್ಲಿರುವ CA ನಿವೇಶನಗಳನ್ನು ಸಹ ರಿಯಾಯಿತಿ ದರದಲ್ಲಿ ಪಡೆದು ಹಾಸ್ಟಲ್‌ಗಳನ್ನು ನಿರ್ಮಿಸಲು ಕ್ರಮವಹಿಸಬೇಕು ಈಗಿರುವ ಆವರಣದಲ್ಲಿ ಹೆಚ್ಚಿನ ಸ್ಥಳಾವಕಾಶವಿಲ್ಲವೆಂದು ತಿಳಿಸಿದರು.

5. ಸದಸ್ಯರಾದ ಶ್ರೀ ಸಮರ್ಥ ಮುನಿರಾಜು ರವರು ಮಾತನಾಡಿ ಮಂಜೂರಾದ ಹಾಸ್ಟಲ್‌ಗಳು ನಮ್ಮ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಮಾತ್ರ ಇವೆಯೆ ಎನುವುದನ್ನೂ ಖಚಿತಪಡಿಸಿಕೊಳ್ಳಬೇಕು. ಅಲ್ಲದೆ ನಿಗದಿತ ಅವಧಿಯಲ್ಲಿ ಕಟ್ಟಡಗಳನ್ನು ಪೂರ್ಣಗೊಂಡು ಉಪಯೋಗಕ್ಕೆ ಲಭ್ಯವಾಗುವ ಭರವಸೆ ಕುರಿತು ಸ್ಪಷ್ಟನೆ ಬರುವವರೆಗೆ ವಿಷಯದ ಪರಿಗಣೆಯನ್ನು ಮುಂದೂಡಬಹುದಾಗಿದೆ ಎಂದು ಅಭಿಪ್ರಾಯಪಟ್ಟರು.

6. ಕುಲಪತಿಗಳು ವಿವರವನ್ನು ನೀಡಿ ವಿಶ್ವವಿದ್ಯಾನಿಲಯಕ್ಕೆ ಹಾಸ್ಟಲ್ ಕಟ್ಟಡದ ಅತ್ಯಂತ ಅಗತ್ಯವಾಗಿದ್ದು, ಈ ಕುರಿತು ಈಗಾಗಲೇ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ನಮ್ಮ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ಉಪಯುಕ್ತವಾಗುವ ಹಾಗೆ ಹಾಸ್ಟೆಲ್ ನಿರ್ಮಾಣವಾಗಬೇಕು. ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಅಭಿವೃದ್ಧಿ ಹಾಗೂ ಬೆಳವಣಿಗೆಗಾಗಿ ವಿಶ್ವವಿದ್ಯಾನಿಲಯದ ಭೌಗೋಳಿಕ ವ್ಯಾಪ್ತಿ ಹೊಂದಿರುವ ಯಲಹಂಕ ಪ್ರದೇಶದಲ್ಲಿ 50 ಎಕರೆ ಜಮೀನು ಮಂಜೂರು ಮಾಡಬೇಕೆಂದು ಸರ್ಕಾರಕ್ಕೆ ವಿನಂತಿಸಲಾಗಿದೆ. ಈ ಕುರಿತು ಬೆಂಗಳೂರು ನಗರ ಜಿಲ್ಲಾಧಿಕಾರಿಯವರಿಂದ ಅಗತ್ಯ ಪ್ರಕ್ರಿಯೆ ಪ್ರಾರಂಭವಾಗಿತ್ತು. ಸರ್ಕಾರಕ್ಕೆ ಸಲ್ಲಿಸಿದ ಪ್ರಸ್ತಾವನೆ ಮಂಜೂರಾದಲ್ಲಿ, ಹಾಸ್ಟಲ್ ಒಳಗೊಂಡು ವಿಸ್ತರಣೆ ಚಟುವಟಿಕೆಗಳನ್ನು ಕೈಗೊಳ್ಳಲು ಅನುಕೂಲವಾಗುತ್ತದೆ ಎಂದು ಹೇಳಿದರು

**<u>ಸಿಂಡಿಕೇಟ್ ತೀರ್ಮಾನ:</u>**

**ಸರ್ಕಾರದ ಪತ್ರಗಳಲ್ಲಿ ಬೆಂಗಳೂರು ನಗರ ಜಿಲ್ಲೆಗೆ 2 ಪರಿಶಿಷ್ಟ ಜಾತಿಯ ಮೆಟ್ರಿಕ್ ನಂತರದ ವಿದ್ಯಾರ್ಥಿಗಳ ಹಾಸ್ಟೆಲ್‌ಗಳಿಗೆ ಮಂಜೂರಾತಿ ನೀಡಲಾಗಿದ್ದು, ಈ ಎರಡು ಹಾಸ್ಟಲ್ ನಮ್ಮ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗಾಗಿ ಪ್ರತ್ಯೇಕವಾಗಿ ಹಾಸ್ಟಲ್ ನಿರ್ಮಾಣವಾಗುವುದಿಲ್ಲ. ಕಾರಣ ಸಮಾಜ ಕಲ್ಯಾಣ ಇಲಾಖೆಯಿಂದ ಈ ಕುರಿತು ಅಗತ್ಯ ಮಾಹಿತಿ ಪಡೆದು ಮಂಡಿಸಬೇಕೆಂದು ಸೂಚಿಸಿ ವಿಷಯವನ್ನು ಮುಂದೂಡಲಾಯಿತು.**

**ಮೇಲೆ ಪ್ರಸ್ತಾಪಿಸಿದಂತೆ, ಜಯನಗರದ ಮಹಿಳಾ ಹಾಸ್ಟಲ್ ಕಟ್ಟಡವನ್ನು ಹಸ್ತಾಂತರಿಸುವ ಕುರಿತು ಬೆಂಗಳೂರು ವಿಶ್ವವಿದ್ಯಾಲಯದೊಂದಿಗೆ; CA ನಿವೇಶನ ಕುರಿತು BDA ದೊಂದಿಗೆ; ಸರ್ಕಾರದ ಹಂತದಲ್ಲಿ ತೀರ್ಮಾನವಾಗಬೇಕಾದ ಯಲಹಂಕ ವ್ಯಾಪ್ತಿಯ 50 ಎಕರೆ ಜಮೀನು ಮತ್ತು ಬೆಂಗಳೂರು ವಿಶ್ವವಿದ್ಯಾನಿಲಯ ಜ್ಞಾನ ಭಾರತಿ ಆವರಣದಲ್ಲಿ ಹಾಸ್ಟಲ್ ಕಟ್ಟಡ ಹಾಗೂ ಶೈಕ್ಷಣಿಕ ಸಂಶೋಧನೆಗಳಿಗೆ ಕಟ್ಟಡ ನಿರ್ಮಾಣಕ್ಕೆ 5 ಎಕರೆ ಜಮೀನು ನೀಡಬೇಕೆಂದು ಕೋರಿ ಪತ್ರ ವ್ಯವಹಾರ ಮತ್ತು ವೈಯುಕ್ತಿಕ ಭೇಟಿ ಮೂಲಕ ಪ್ರಯತ್ನಿಸಬೇಕೆಂದು ಸಭೆ ಸೂಚಿಸಿತು.**

**ವಿಷಯ ಸಂಖ್ಯೆ: 12**

ವಿಷಯ: ಬೆಂಗಳೂರು ನಗರ ವಿಶ್ವವಿದ್ಯಾಲಯದ ಕ್ಯಾಂಪಸ್ ಪುನರಾಭಿವೃದ್ಧಿ ಕಾಮಗಾರಿಯ ಪರಿಷ್ಕೃತ ಅಂದಾಜು ಪಟ್ಟಿ.

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆ ಇಡಿ 103 ಹೆಚ್‌ಪಿಯು 2020 ದಿನಾಂಕ: 05-10-2020
2. ಸರ್ಕಾರದ ಆದೇಶ ಸಂಖ್ಯೆ ಇಡಿ 103 ಹೆಚ್‌ಪಿಯು 2020 ದಿನಾಂಕ: 24-03-2021
3. ಕಾರ್ಯನಿರ್ವಾಹಕ ಅಭಿಯಂತರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರವರ ಪತ್ರ ಸಂಖ್ಯೆ: ಆಕುಕ:ಸಕಾಇಂ:ಬೆಂಕೇಮ: ಸಇಂ-1:789:2022-23 ದಿನಾಂಕ: 15-09-2022

***<u>ಪರಮಾರ್ಶಕ ಟಿಪ್ಪಣಿ:</u>***

ಉಲ್ಲೇಖ 1ರ ಸರ್ಕಾರದ ಆದೇಶ ಸಂಖ್ಯೆ ಇಡಿ 103 ಹೆಚ್‌ಪಿಯು 2020 ದಿನಾಂಕ: 05-10-2020 ಪ್ರಕಾರ ಬೆಂಗಳೂರು ನಗರ ವಿಶ್ವವಿದ್ಯಾಲಯದ ಕ್ಯಾಂಪಸ್ ಪುನರಾಭಿವೃದ್ಧಿ (Campus Redevelopment)

ಯೋಜನೆಯನ್ನು ಸಿದ್ದಪಡಿಸಲು ರಾಜ್ಯ ಸರ್ಕಾರದ ಸಂಸ್ಥೆಯಾದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಸಂಸ್ಥೆಗೆ ವಹಿಸಿ ಆದೇಶಿಸಿದೆ ಮತ್ತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನಿಯರಿಂಗ್ ಘಟಕವು ರೂ. 155.00 ಕೋಟಿ ಮೊತ್ತಕ್ಕೆ ಅಂದಾಜು ಪಟ್ಟಿಯನ್ನು ಸಿದ್ಧಪಡಿಸಿರುತ್ತದೆ.

ಉಲ್ಲೇಖ 2ರ ಸರ್ಕಾರದ ಆದೇಶ ಸಂಖ್ಯೆ ಇಡಿ 103 ಹೆಚ್‌ಪಿಯು 2020 ದಿನಾಂಕ: 24-03-2021ರ ಪ್ರಕಾರ ಬೆಂಗಳೂರು ನಗರ ವಿಶ್ವವಿದ್ಯಾಲಯದ ಕ್ಯಾಂಪಸ್ ಪುನರಾಭಿವೃದ್ಧಿ ಕಾಮಗಾರಿಯ ಮೊತ್ತ ರೂ. 155.00 ಕೋಟಿ (ಒಂದು ನೂರ ಐವತ್ತೈದು ಕೋಟಿ ರೂಪಾಯಿಗಳು ಮಾತ್ರ) ಗಳ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಿ ಸರ್ಕಾರದ ಸಂಸ್ಥೆಯಾದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನಿಯರಿಂಗ್ ಘಟಕದ ವತಿಯಿಂದ ಅನುಷ್ಠಾನಗೊಳಿಸಲು ಆದೇಶಿಸಿರುತ್ತದೆ.

ಸದರಿ ಯೋಜನೆಯ ಕಾಮಗಾರಿಗಳು ಪ್ರಗತಿಯಲ್ಲಿದ್ದು ಈ ಕೆಳಕಂಡ ಕೆಲಸಗಳನ್ನು ಪೂರ್ಣಗೊಳಿಸಿರುತ್ತದೆ.

1. ಪ್ರಸನ್ನ ಕುಮಾರ ಬ್ಲಾಕ್‌ನಲ್ಲಿರುವ ಅಕಾಡೆಮಿಕ್ ಬ್ಲಾಕ್‌ನ 8 ಮಹಡಿಗಳ Structural ಕೆಲಸ ಪೂರ್ಣಗೊಂಡಿದೆ
2. ಈಜುಕೊಳದ ಕಾಮಗಾರಿ ಪ್ರಗತಿಯಲ್ಲಿದೆ
3. ದೈಹಿಕ ಶಿಕ್ಷಣ ಬ್ಲಾಕ್‌ನ super structure ಕೆಲಸ ಪೂರ್ಣಗೊಂಡಿದೆ.
4. ಸೆಂಟ್ರಲ್ ಕಾಲೇಜು ಆವರಣದಲ್ಲಿರುವ ಪಾರಂಪರಿಕ ಕಟ್ಟಡಗಳ ದುರಸ್ತಿ ಕಾಮಗಾರಿ ಪ್ರಗತಿಯಲ್ಲಿದೆ.

ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಕ್ಯಾಂಪಸ್ ಪುನರಾಭಿವೃದ್ಧಿ ಕಾಮಗಾರಿಗೆ ರೂ. 124,00,00,000.00 (ಒಂದು ನೂರ ಇಪ್ಪತ್ತ ನಾಲ್ಕು ಕೋಟಿ ರೂಪಾಯಿಗಳು) ಗಳನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನಿಯರಿಂಗ್ ವಿಭಾಗಕ್ಕೆ ಬಿಡುಗಡೆ ಮಾಡಿರುತ್ತದೆ.

ಈಗ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನಿಯರಿಂಗ್ ಘಟಕವು ಉಲ್ಲೇಖ 3ರ ಪತ್ರ ಸಂಖ್ಯೆ: ಆಕುಕ:ಸಕಾಇಂ:ಬೆಂಕೇಮ:ಸಇಂ-1:789:2022-23 ದಿನಾಂಕ: 15-09-2022 ರಲ್ಲಿ ಸದರಿ ಯೋಜನೆಯ ಪರಿಷ್ಕೃತ ಅಂದಾಜು ಪಟ್ಟಿಯ ಮೊತ್ತ ಈ ಕೆಳಕಂಡ ಕಾರಣಗಳಿಂದ ರೂ. 168,62,63,600/- ಗಳಾಗುತ್ತಿದೆ ಎಂದು ತಿಳಿಸಿರುತ್ತಾರೆ.

1. ಟೆಂಡರ್ ಪ್ರೀಮಿಯಮ್ ಮತ್ತು ಬೆಲೆ ಏರಿಕೆಯ ವ್ಯತ್ಯಾಸ
2. ಜಿಎಸ್‌ಟಿ ಮೊತ್ತ ಶೇ. 12% ರಿಂದ ಶೇ. 18% ಕ್ಕೆ ಏರಿಕೆ
3. ಪ್ರೈಸ್ ಅಡ್ಜಸ್ಟ್‌ಮೆಂಟ್ (ಟೆಂಡರ್ ಉಪನಿಯಮ 40ರಂತೆ)

ಯೋಜನೆಯ ಪರಿಷ್ಕೃತ ಅಂದಾಜು ಪಟ್ಟಿಯ ವಿವರಗಳು ಈ ಕೆಳಕಂಡಂತಿದೆ:

| ಕ್ರ. ಸಂ. | ವಿವರ | ಮೊತ್ತ ರೂ. ಗಳಲ್ಲಿ | | ವ್ಯತ್ಯಾಸ ರೂ. ಗಳಲ್ಲಿ |
|---|---|---|---|---|
| | | ಅಂದಾಜು ಪಟ್ಟಿಯಲ್ಲಿ ಅಳವಡಿಸಿಕೊಂಡಿರುವಂತೆ | ಪ್ರಸ್ತುತ ಕಾಮಗಾರಿ ವೆಚ್ಚ | |
| 1 | ಟೆಂಡರ್ ಮೊತ್ತ | 121,01,73,692.00 | 121,01,73,692.00 | - |
| 2 | ಟೆಂಡರ್ ಪ್ರೀಮಿಯಮ್ | 10,69,04,812.00 | 15,73,22,580.00 | 5,04,17,768.00 |
| 3 | ಒಟ್ಟು | 131,70,78,504.00 | 136,74,96,272.00 | 5,04,17,768.00 |
| 4 | ಪ್ರೈಸ್ ಅಡ್ಜಸ್ಟ್‌ಮೆಂಟ್ (ಟೆಂಡರ್ ಉಪನಿಯಮ 40ರಂತೆ) | 4,75,00,408.00 | 9,57,24,739.00 | 4,82,24,331.00 |
| 5 | ಶಾಸನಬದ್ಧ ಶೇವಣಿಗಳಾದ ವಿದ್ಯುತ್, ಅಗ್ನಿ ಶಾಮಕ, ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ಇತರೆ ವೆಚ್ಚಗಳು | 1,17,00,000.00 | 77,93,260.00 | -39,06,740.00 |
| 6 | ಮೇಲಿನ ಅಂಶಗಳಿಗೆ ಜಿಎಸ್‌ಟಿ @ 12% (ಜಿಎಸ್‌ಟಿ ವ್ಯತ್ಯಾಸ 6% ಸೇರಿದಂತೆ) | 16,48,14,761.00 | 20,89,49,329.00 | 4,41,34,568.00 |
| 7 | ಸಮಾಲೋಚಕರ ಶುಲ್ಕ | 89,06,327.00 | 63,00,000.00 | -26,06,327.00 |
| | ಒಟ್ಟು | **1,55,00,00,000.00** | **1,68,62,63,600.00** | **13,62,63,600.00** |

ಮೂಲ ಅಂದಾಜು ಪಟ್ಟಿಯ ಮೊತ್ತ ರೂ. 1,55,00,00,000/- ಗಳಿಂದ ರೂ. 1,68,62,63,600/-ಗಳಿಗೆ ಪರಿಷ್ಕೃತ ಅಂದಾಜು ಪಟ್ಟಿಯ ಮೊತ್ತವು ಏರಿಕೆಯಾಗಿರುತ್ತದೆ ಮತ್ತು ಹಿಂದಿನ ಅಂದಾಜು ಪಟ್ಟಿಗಿಂತ ರೂ. 13,62,63,600/- ಗಳಷ್ಟು ಅಧಿಕವಾಗಿರುತ್ತದೆ ಎಂದು ಉಲ್ಲೇಖ 3ರ ಪತ್ರ ಸಂಖ್ಯೆ: ಆಕುಕ:ಸಕಾಇಂ: ಬೆಂಕೇಮ:ಸಇಂ-1:789:2022-23 ದಿನಾಂಕ: 15-09-2022 ರಲ್ಲಿ ಕಾರ್ಯನಿರ್ವಾಹಕ ಅಭಿಯಂತರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರವರು ತಿಳಿಸಿರುತ್ತಾರೆ.

ಕಾರ್ಯನಿರ್ವಾಹಕ ಅಭಿಯಂತರರು, ಇಂಜಿನಿಯರಿಂಗ್ ಘಟಕ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರವರು ಪರಿಷ್ಕೃತ ಅಂದಾಜು ಪಟ್ಟಿಯ ಮೊತ್ತ ರೂ. 1,68,62,63,600.00 ಗಳಿಗೆ ಅನುಮೋದನೆ ನೀಡಬೇಕೆಂದು ಕೋರಿರುತ್ತಾರೆ.

ಆದುದರಿಂದ ಸದರಿ ವಿಷಯನ್ನು ಚರ್ಚಿಸಲು ಮತ್ತು ತೀರ್ಮಾನಕ್ಕಾಗಿ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಲಾಗಿದೆ.

ವಿವರಣೆ:

ಸದಸ್ಯರಾದ ಶ್ರೀ ಎಂ. ವಿ. ರಂಗಪ್ಪನವರು ಹೊಸ ಕಟ್ಟಡಗಳು, ನವೀಕರಣಗೊಳ್ಳುತ್ತಿರುವ ಕಟ್ಟಡಗಳು ಉದ್ಯಾನವನ ನಿರ್ಮಾಣಗೊಳ್ಳುತ್ತಿರುವ ಸಂದರ್ಭದಲ್ಲಿ, ಕಟ್ಟಡಗಳ ಹಾಗೂ ಉದ್ಯಾನವನಗಳ ನಿರ್ವಹಣೆ ಅತೀ ಮುಖ್ಯವಾಗಿದ್ದು ಕಟ್ಟಡ ಹಾಗೂ ಉದ್ಯಾನ ನಿರ್ವಹಣೆಗಾಗಿ ಅಧಿಕಾರಿಗಳು ಗಮನ ಹರಿಸಿ ಯೋಜನೆ ರೂಪಿಸಿಬೇಕೆಂದು ತಿಳಿಸಿದರು.

ಸೆಂಟ್ರಲ್ ಕಾಲೇಜು ಮತ್ತು ಪ್ರಸನ್ನ ಕುಮಾರ ಬ್ಲಾಕ್‌ಗಳಿಗೆ ಸಂಪರ್ಕ ಕಲ್ಪಿಸಲು ಮೇಲು ಸೇತುವೆ ನಿರ್ಮಾಣ ಮಾಡಲು ಕ್ರಮವಹಿಸಬೇಕು ಇದಲ್ಲದೆ ವಿಶ್ವವಿದ್ಯಾನಿಲಯದಲ್ಲಿ ವ್ಯವಸ್ಥಿತವಾದ ಅತಿಥಿ ಗೃಹವಿಲ್ಲದಿರುವುದರಿಂದ ವಿಶ್ವವಿದ್ಯಾಲಯಕ್ಕೆ ಭೇಟಿ ನೀಡುವ ಪ್ರಾಧ್ಯಾಪಕರುಗಳಿಗೆ ಹಾಗೂ ತಜ್ಞರಿಗೆ ಅತಿಥಿ ಸತ್ಕಾರ

ನೀಡಲು ಅತಿಥಿ ಗೃಹದ ಅವಶ್ಯಕತೆ ಇದೆ ಎಂದು ಹೇಳಿದರು. ಯುಜಿಸಿಯವರು ತೆರವು ಮಾಡಿರುವ ಕಟ್ಟಡವನ್ನು ಅತಿಥಿ ಗೃಹವಾಗಿ ಪರಿವರ್ತಿಸಲು ಕ್ರಮವಹಿಸಬೇಕೆಂದು ತಿಳಿಸಿದರು ಹಾಗೂ ಪರೀಕ್ಷಾ ವಿಭಾಗದ ಕಟ್ಟಡ ಶಿಥಿಲಾವಸ್ಥೆಯಲ್ಲಿದ್ದು ಮರ, ಗಿಡಗಳು ಬೆಳೆದಿರುವುದು ಗೋಚರಕ್ಕೆ ಬಂದಿದ್ದು, ಈ ಕಟ್ಟಡವನ್ನು ತುರ್ತಾಗಿ ರಿಪೇರಿ ಕೆಲಸವಾಗಬೇಕೆಂದು ತಿಳಿಸಿದರು.

**ಸಿಂಡಿಕೇಟ್ ತೀರ್ಮಾನ:**

ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಕ್ಯಾಂಪಸ್ ಪುನರಾಭಿವೃದ್ಧಿ ಯೋಜನೆಯನ್ನು ರೂ.**1,55,00,00,000** ಮೊತ್ತಕ್ಕೆ ಸರ್ಕಾರದ ಆದೇಶ ಸಂಖ್ಯೆ ಇಡಿ **103** ಹೆಚ್‌ಪಿಯು **2020** ದಿನಾಂಕ **05.10.2020** ರಲ್ಲಿ ಕರ್ನಾಟಕ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಇಂಜಿನಿಯರಿಂಗ್ ಘಟಕಕ್ಕೆ ವಹಿಸಿ ಆದೇಶಿಸಲಾಗಿದೆ. ಸದರಿ ಮೊತ್ತದಲ್ಲಿ ರೂ. **1,24,00,00,000** ಮೊತ್ತವನ್ನು ಈಗಾಗಲೇ ಬಿಡುಗಡೆ ಮಾಡಲಾಗಿದೆ. ಈಗ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಇಂಜಿನಿಯರಿಂಗ್ ಘಟಕದವರು, ಟೆಂಡರ್ ಪ್ರಿಮಿಯಮ್ ರೂ. 5,04,17,768.00 ಮತ್ತು ದರ ಹೊಂದಾಣಿಕೆ **(Price Adjustment)** ರೂ. 4,82,24,331.00 ಜಿ.ಎಸ್.ಟಿ ವ್ಯತ್ಯಾಸದ ಮೊತ್ತ ರೂ. 4,41,34,568.00 ಗಳಿಗೆ ಸಂಬಂಧಿಸಿದಂತೆ ಒಟ್ಟು ವ್ಯತ್ಯಾಸದ ಮೊತ್ತ ರೂ. **14,27,76,667.00** ಆಗಲಿದ್ದು, ಇದರಲ್ಲಿ ಶಾಸನಬದ್ಧ ಸೇವಣೆಗಳಾದ ವಿದ್ಯುತ್ ಅಗ್ನಿ ಶಾಮಕ ಮಾಲಿನ್ಯ ನಿಯಂತ್ರಣ ಇತ್ಯಾದಿಗಳಲ್ಲಿ ಉಳಿಕೆ ರೂ. **39,06,740** ಹಾಗೂ ಸಮಾಲೋಚಕರ ಶುಲ್ಕದಲ್ಲಿ ಉಳಿಕೆ ಮೊತ್ತ ರೂ. **26,06,327** ಗಳನ್ನು ಕಳೆದ ಮೇಲೆ ಉಳಿಯುವ ಒಟ್ಟು ಮೊತ್ತ ರೂ. **13,62,63,600.00** (ಹದಿಮೂರು ಕೋಟಿ ಅರವತ್ತೆರಡು ಲಕ್ಷ ಅರವತ್ತಮೂರು ಸಾವಿರ ಆರು ನೂರು) ಗಳು ಸೇರಿದಂತೆ ಸಲ್ಲಿಸಿರುವ ಒಟ್ಟು ರೂ. **1,68,62,63,600** ಗಳ ಪರಿಷ್ಕೃತ ಅಂದಾಜು ಪಟ್ಟಿಯ ಕುರಿತು ಚರ್ಚಿಸಿ ದಿನಾಂಕ **19.12.2020**ರ ಸರ್ಕಾರದ ಆದೇಶದಲ್ಲಿ ಎಲ್ಲಾ ಕಾಮಗಾರಿಗಳ ಒಟ್ಟು ವೆಚ್ಚವು ಸರ್ಕಾರವು ಅನುಮತಿಸಿದ ವೆಚ್ಚವನ್ನು ಮೀರತಕ್ಕದಲ್ಲ. ಪ್ರತಿಯೊಂದು ಕಾಮಗಾರಿಗಳ ಮೂಲ ಅಂದಾಜು ಮೊತ್ತವು ಪರಿಷ್ಕೃತಗೊಂಡಲ್ಲಿ ಮತ್ತು ದರ ಹೊಂದಾಣಿಕಗಾಗಿ ನಿಗದಿಪಡಿಸಿರುವ ಅನುದಾನವನ್ನು ಬಳಸುವ ಮುನ್ನ ಸರ್ಕಾರದ ಅನುಮೋದನೆಯನ್ನು ಪಡೆಯವ ಹಾಗೂ ದಿನಾಂಕ. **06.08.2021** ರ ಆದೇಶದಲ್ಲಿ ಕಾಮಗಾರಿಯ ಸಂಪೂರ್ಣ ಮೊತ್ತವು ಆಡಳಿತಾತ್ಮಕ ಅನುಮೋದನೆ ನೀಡಿರುವ ಮೊತ್ತವನ್ನು ಮೀರತಕ್ಕದ್ದಲ್ಲ ಎಂಬ ಸರ್ಕಾರದ ನಿರ್ದೇಶನದ ಹಿನ್ನೆಲೆಯಲ್ಲಿ ಸೂಕ್ತ ತೀರ್ಮಾನಕ್ಕಾಗಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಸಿಂಡಿಕೇಟ್ ಸಭೆ ತೀರ್ಮಾನಿಸಿತು.

ಕುಲಸಚಿವರು (ಮೌಲ್ಯಮಾಪನ) ರವರಿಂದ ವಂದನಾರ್ಪಣೆ ಮತ್ತು ರಾಷ್ಟ್ರಗೀತೆಯೊಂದಿಗೆ ಸಭೆ ಮುಕ್ತಾಯವಾಯಿತು.

| | |
|---|---|
| ಸಹಿ/- | ಸಹಿ/- |
| ಕುಲಸಚಿವರು | ಕುಲಪತಿಗಳು |
| ಸದಸ್ಯಕಾರ್ಯದರ್ಶಿಗಳು | ಸಭಾಧ್ಯಕ್ಷರು |

ಕುಲಸಚಿವರು
ಬೆಂಗಳೂರು ನಗರ ವಿಶ್ವವಿದ್ಯಾನಿಲಯ
ಬೆಂಗಳೂರು